# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ವಿಶ್ವಾಮಿತ್ರ ಪ್ರತಾಪ ಮತ್ತು ದುಷ್ಯಂತ ಚರಿತ್ರೆ

ಕವಿ

## ಬವಲಾಡಿ ಹಿರಿಯಣ್ಣ ಹೆಬ್ಬಾರ್

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ನವೆಂಬರ್ ೧೫, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾರ್ಯವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪಾವಂಜೆ ಗುರುರಾವ್ & ಸನ್ಸ್, ಶ್ರೀ ಕೃಷ್ಣ ಮುದ್ರಣಾಲಯ, ಉಡುಪಿ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೩೯೭

**ಪಾತ್ರಗಳು:**

ಕೌಶಿಕ (ವಿಶ್ವಾಮಿತ್ರ), ತ್ರಿಶಂಕು, ಚಂಡಾಲ, ವಸಿಷ್ಠ ಮುನಿ, ಇಂದ್ರ, ಮೇನಕೆ, ದುಷ್ಯಂತ, ಶಕುಂತಲೆ, ದೂರ್ವಾಸ ಮುನಿ, ಕಣ್ವ ಮುನಿ, ಮಾರೀಚ ಮುನಿ, ಭರತ, ದುರ್ಜಯ, ವನಪಾಲಕರು, ಸಖಿಯರು, ಮುನಿಕುಮಾರರು

**ಕಥಾ ಸಾರಾಂಶ:**

ಸಾಕೇತಾಧಿಪನಾದ ತ್ರಿಶಂಕು ಚಕ್ರವರ್ತಿಯು ಸದೇಹದಿಂದ ಸ್ವರ್ಗಲೋಕಕ್ಕೆ ಹೋಗುವ ಅಪೇಕ್ಷೆಯಿಂದ ವಸಿಷ್ಠಮುನಿಗಳಲ್ಲಿಗೆ ಬಂದಾಗ ಅವರ ಮಕ್ಕಳಿಂದ ಗುರವಾಕ್ಯವನ್ನು ಉಪೇಕ್ಷಿಸಿದ ಕಾರಣಕ್ಕೆ ಚಂಡಾಲನಾಗುವಂತೆ ಶಾಪವನ್ನು ಹೊಂದುತ್ತಾನೆ. ನಂತರ ತ್ರಿಶಂಕುವಿಗೆ ಮಹರ್ಷಿ ವಿಶ್ವಾಮಿತ್ರರ ಸಂದರ್ಶನವಾಗಿ ಸಕಲ ವಿಷಯಗಳನ್ನು ಅವರಿಗೆ ತಿಳಿಸುತ್ತಾನೆ. ವಿಶ್ವಾಮಿತ್ರರ ತಪೋಬಲದಿಂದ ಸ್ವರ್ಗಕ್ಕೆ ಕಳುಹಲ್ಪಟ್ಟ ತ್ರಿಶಂಕುವನ್ನು ಇಂದ್ರನು ಭೂಮಿಗೆ ಹಿಂತಿರುಗಿ ಕಳುಹುತ್ತಾನೆ. ಇದರಿಂದ ಕೋಪಗೊಂಡ ವಿಶ್ವಾಮಿತ್ರರು ಇಂದ್ರನ ಸ್ವರ್ಗಕ್ಕೆ ಸರಿಸಮನಾದ ಮತ್ತೊಂದು ಸ್ವರ್ಗಲೋಕವನ್ನು ಸೃಷ್ಟಿಸಿ ತ್ರಿಶಂಕುವನ್ನು ಅಲ್ಲಿಗೆ ಕಳುಹುತ್ತಾರೆ.

ಬ್ರಹ್ಮರ್ಷಿಯಾಗಬೇಕೆಂದು ಘೋರ ತಪಸ್ಸಿನಲ್ಲಿ ನಿರತರಾದ ವಿಶ್ವಾಮಿತ್ರರನ್ನು ತಪೋಭಂಗಗೊಳಿಸಲು ದೇವತೆಗಳು ಮೇನಕೆಯೆಂಬ ಅಪ್ಸರೆಯನ್ನು ಕಳುಹಿಸುತ್ತಾರೆ. ಮೇನಕೆಯ ಸೌಂದರ್ಯದಿಂದ ತಪೋವಿಚಲಿತರಾದ ವಿಶ್ವಾಮಿತ್ರರು ಅವಳನ್ನು ಮೋಹಿಸುತ್ತಾರೆ. ಅವರ ಸಮ್ಮಿಲನದ ಫಲವಾಗಿ ಜನಿಸಿದವಳು ಶಕುಂತಲೆ.

ತಂದೆತಾಯಿಯರಿಂದ ತ್ಯಜಿಸಲ್ಪಟ್ಟ ಶಕುಂತಲೆ ಕಣ್ವರ ಆಶ್ರಯದಲ್ಲಿ ಬೆಳೆಯುತ್ತಾಳೆ. ಬೇಟೆಗಾಗಿ ಬಂದ ದುಷ್ಯಂತನು ಶಕುಂತಲೆಯನ್ನು ವಿವಾಹವಾಗಿ ತಂದೆಯನ್ನೊಪ್ಪಿಸಿ ತನ್ನ ರಾಜ್ಯಕ್ಕೆ ಕರೆಸಿಕೊಳ್ಳುವುದಾಗಿ ತಿಳಿಸಿ ತನ್ನ ಗುರುತಿಗಾಗಿ ಉಂಗುರಮುದ್ರೆಯೊಂದನ್ನು ನೀಡಿ ತೆರಳುತ್ತಾನೆ. ಹಲವು ದಿನಗಳು ಸಂದರೂ ಹಿಂತಿರುಗಿ ಬರದ ಕಾರಣ ಶಕುಂತಲೆಯು ದುಷ್ಯಂತನ ಅರಮನೆಗೆ ಹೋಗಲು ದೂರ್ವಾಸರ ಶಾಪದಿಂದಾಗಿ ಅವನಿಗೆ ತನ್ನ ಪತ್ನಿಯ ನೆನಪು ಮರೆತುಹೋಗಿ ಅವಳನ್ನು ಅವಮಾನಿಸುತ್ತಾನೆ. ಗರ್ಭಿಣಿಯಾಗಿದ್ದ ಶಕುಂತಲೆಯು ಮಾರೀಚಮುನಿಯ ಆಶ್ರಯದಲ್ಲಿ ಭರತನಿಗೆ ಜನ್ಮ ನೀಡುತ್ತಾಳೆ. ನಂತರ ದುಷ್ಯಂತನಿಗೆ ತಾನು ಶಕುಂತಲೆಗೆ ನೀಡಿದ ಉಂಗುರ ಸಿಕ್ಕಿ, ಅವಳ ಮತ್ತು ಭರತನ ಭೇಟಿಯಾಗುವುದನ್ನು ವಿವರಿಸುವ ಸುಂದರವಾದ ಪ್ರಸಂಗವಿದು.

**ಕವಿ ಪರಿಚಯ : (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಹಿರಿಯಣ್ಣ ಹೆಬ್ಬಾರರು ಕುಂದಾಪುರ ತಾಲೂಕಿನ ಬವುಲಾಡಿಯವರು. ತಂದೆ ಶಂಭು ಹೆಬ್ಬಾರ ಮತ್ತು ತಾಯಿ ಸುಬ್ಬಮ್ಮ. ಇವರ ಕಾಲ ೧೮೭೭ – ೧೯೪೨. ಸಂಸ್ಕೃತ ವಿದ್ವಾಂಸರು. ಯಕ್ಷಗಾನ ಭಾಗವತಿಕೆ ಮತ್ತು ಮೃದಂಗವಾದನದಲ್ಲಿ

ಪರಿಣಿತರು. ಮುದ್ದಣ ಕವಿಗೆ ಗುರುಸ್ಥಾನದಲ್ಲಿದ್ದ ಬವುಲಾಡಿ ವೆಂಕಟರಮಣ ಹೆಬ್ಬಾರರು ಇವರ ಅಣ್ಣ. ಮೊಗೇರಿ ರಾಮಪ್ಪ ಅಡಿಗರಲ್ಲಿ ಕಾವ್ಯ, ವ್ಯಾಕರಣಾದಿಗಳನ್ನು ಅಧ್ಯಯನ ಮಾಡಿದ್ದರು. ಕೊಲ್ಲೂರಿನ ಗೋಪಾಲಕೃಷ್ಣ ದೇವಾಲಯದಲ್ಲಿ ಸ್ವಲ್ಪಕಾಲ ಅರ್ಚಕರಾಗಿದ್ದರು. ಅನಂತರ ಹೊಸಕೋಟೆಗೆ ಹೋಗಿ ಕೃಷಿಯನ್ನು ಅವಲಂಬಿಸಿದ್ದರು. ನಾಯಕನಕಟ್ಟೆ ಮತ್ತು ಬೈಂದೂರುಗಳಲ್ಲಿ ಅಧ್ಯಾಪಕರಾಗಿಯೂ ಸೇವೆ ಸಲ್ಲಿದ್ದರು.

ಇವರು ಬರೆದ ಪ್ರಸಂಗಗಳು: ವಿಶ್ವಾಮಿತ್ರ ಪ್ರತಾಪ, ಪಾಂಡವ ವಿಜಯ, ಭಾನುಮತಿ ಕಲ್ಯಾಣ, ಮಾರಿಕಾ ಮಹಾತ್ಮೆ, ದುಷ್ಯಂತ ಚರಿತ್ರೆ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಮೊದಲನೆಯ ಸಂಧಿ : ವಿಶ್ವಾಮಿತ್ರ ಪ್ರತಾಪ**

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀಮತ್ಸೋಮಮನಾದಿದೇವಮಖಿಲೋತ್ತುಂಗಂ ತುರಂಗಾರ್ಚಿತಂ
ಶ್ರೀಮತ್ಸೋಮಸಖಂ ಸತೀಶವಿಜಿತಾನಂಗಂ ಭುಜಂಗೇಂದ್ರಜಮ್ |
ಶ್ರೀಮತ್ಸೋಮಕದಕ್ಷಯಜ್ಞವಿಲಯಂ ಶೃಂಗೀಶಗಂಗಾಧರಂ
ಶ್ರೀಮತ್ಸೋಮಧರಂ ಹರಂ ವರಮಹಾಲಿಂಗಂ ಶುಭಾಂಗಂ ಭಜೇ || ೧ || || 1 ||

**ನಾಟಿ - ಝಂಪೆ**
ಜಯ ಜಯತು ಗಜವದನ | ಜಯ ಜಯತು ಜಿತಮದನ |
ಜಯ ಜಯತು ರವಿತೇಜ | ಜಯತು ಗಣರಾಜ ||
ಜಯ ಜಯತು ಜಯತು || ಪ ||
ವಿಘ್ನವಿಪಿನಕುಠಾರ | ವಿಘ್ನಶೈಲಸಮೀರ |
ವಿಘ್ನತಿಮಿರದಿನೇಶ | ವಿಘ್ನೌಘನಾಶ || ಜಯ || ೧ ||

ತ್ರಿದಶವಂದಿತಚರಣ | ವಿಧೃತಸಕಲಾಭರಣ |
ಮದನಾರಿಸುಕುಮಾರ | ಸದಮಲಶರೀರ || ಜಯ || ೨ ||

ಪರಮಪಾವನಚರಿತ | ದುರಿತಸಂಚಯರಹಿತ |
ಶರಣಜನರನು ಕಾವ | ಕರುಣಾಳು ದೇವ || ಜಯ || ೩ || || 4 ||

**ವಾರ್ಧಕ**
ಹರಿಯಂ ಮಹಾವ್ಯಕ್ತನಂ ಭಕ್ತಭಕ್ತನಂ |
ಹರನಂ ಜಗತ್ಪಾಲನಂ ಕಾಲಕಾಲನಂ |
ಶರಣಜನಸಂಜೀವನಂ ದೇವದೇವನಂ ಭವನಂ ರಮಾಧವನನು ||
ದುರಿತಭೂಜಕುಠಾರನಂ ವೀರವೀರನಂ |
ಸುರಪಾಲನುತಪಾದನಂ ವೇದವೇದ್ಯನಂ |
ತರಣಿಶಶಿದಹನಾಕ್ಷನಂ ದಕ್ಷದಕ್ಷನಂ ನುತಿಸಿ ಪಡೆವೆಂ ಮತಿಯನು || ೧ || || 5 ||

**ನಾಟಿ - ರೂಪಕ**
ಜಯ ಜಯ ಭುವನವಿನಾಯಕಿ | ಜಯ ಜಯ ಭಾಗ್ಯವಿದಾಯಕಿ |
ಜಯ ಜಯ ಚಂದ್ರನಿಭಾನನೆ | ಜಯ ಜಯ ಮೃಗನಯನೆ ||
ಜಯ ಜಯ ಜಯ ಜಯತು || ಪ ||
ಶರಣಜನವ್ರಜಪಾಲಿನಿ | ನಿರುಪಮಸದ್ಗುಣಶಾಲಿನಿ |
ಗಿರಿರಾಜನ ಪುತ್ರಿಯೆ ಸರ | ಸಿರುಹಾಯತನೇತ್ರೆ ||
ಕರಿಚರ್ಮಾಂಬರ ಮೋಹಿನಿ | ಕರಿಸಂಕುಲರಿಪುವಾಹಿನಿ |
ಕರುಣದಿ ಸಲಹೆನ್ನನು ನೀಂ | ಕರಿವದನನ ಜನನಿ || ೧ ||

ಸುಳಿಗುರುಳಿನ ನಳಿದೋಳ್ಗಳ | ಬೆಳಗುವ ರದನದ ಸಾಲ್ಗಳ |
ಮಲಯಜಗಂಧದ ಗಾತ್ರದ | ಥಳಥಳಿಸುವ ಮೊಗದ ||
ಚೆಲುವನೊಳಚ್ಯುತನೆಡೆಯಲಿ | ನೆಲಸಿದ ಲಕ್ಷ್ಮಿಯೆ ಮುದದಲಿ |
ಸಲಹೆನ್ನನು ಸುಮಮಂದಿರೆ | ಜಲನಿಧಿನಂದಿನಿಯೆ || ೨ || || 7 ||

**ಸೌರಾಷ್ಟ್ರ - ಅಷ್ಟ**
ವಾಣೀ ಸರೀಸೃಪ | ವೇಣಿ ನಂಬಿದೆ ನಿನ್ನ | ಶಾರದಾಂಬಾ || ಕೀರ |
ವಾಣಿ ವಾಗ್ದೇವಿ ಕ | ಲ್ಯಾಣಿಯೆ ಸಲಹೆನ್ನ | ಶಾರದಾಂಬಾ || ೧ ||

ನೀಲಕುಂತಳೆ ಚಾರು | ಶೀಲೆ ಸಾರಸನೇತ್ರೆ | ಶಾರದಾಂಬಾ || ಗುಣ |
ಮಾಲೆ ಮಂಗಲವನ್ನು | ಪಾಲಿಸೆ ಶುಭಗಾತ್ರೆ | ಶಾರದಾಂಬಾ || ೨ ||

ಅರವಿಂದಗಂಧಿನಿ | ಸುರನುತೆ ಭಾರತಿ | ಶಾರದಾಂಬಾ || ಸತ್ಯ |
ಪುರದೊಳಗಿಹ ಪುಣ್ಯ | ಚರಿತೆ ಸರಸ್ವತಿ | ಶಾರದಾಂಬಾ || ೩ || || 10 ||

**ಭಾಮಿನಿ**
ದ್ವಿಜಶಯನಸುತಸತಿಯ ಪ್ರಾರ್ಥಿಸಿ |
ದ್ವಿಜಪತಿಧ್ವಜಸುತಗೆ ವಂದಿಸಿ |
ದ್ವಿಜವಿಭೂಷಣತನಯರಂಘ್ರಿಗೆ ನಮಿಸಿ ಭಕ್ತಿಯಲಿ ||
ದ್ವಿಜಕುಲೋದ್ಭವನಾಗಿ ಸಬಲ |
ದ್ವಿಜರ ಕೊಂದವಗೆರಗುತೇಕ |
ದ್ವಿಜಗೆ ಮಣಿವೆನು ಮಗುಳೆ ನಿರ್ವಿಘ್ನತೆಯನೀವುದಕೆ || ೧ || || 11 ||

**ವಾರ್ಧಕ**
ವಾಸವಾದ್ಯಖಿಳಗೀರ್ವಾಣರಂ ಸಕಲದಿಗ |
ಧೀಶರಂ ಸ್ಮರಿಸಿ ವೇದವ್ಯಾಸಮುಖ್ಯ ಮೌ |
ನೀಶರಂ ಧ್ಯಾನಿಸಿ ದಿವಾಕರಪ್ರಮುಖಗ್ರಹರ್ಗೆರಗಿ ಭಕ್ತಿಯಿಂದ ||
ವಾಸುದೇವಸ್ಮರಣೆಯಿಂ ಬಿಡದೆ ನಿಖಿಲಸುಕ |
ವೀಶರೊಲವಂ ಪಡೆದು ಸರ್ವಸಮ್ಮತವೆನಿಸು |
ವೀ ಸುಪ್ರಬಂಧಮಂ ಮಾಡಿದಪೆನೀ ಮಹಾಲಿಂಗಪ್ರಸಾದದಿಂದ || ೧ || || 12 ||

**ಚತುಷ್ಪದಿ**
ಭಾರತಮಹಾಪುರಾಣದಲಿ ಕೌಶಿಕನು |
ಘೋರತಪದಿಂದ ಬ್ರಹ್ಮರ್ಷಿಯಾದುದನು ||
ಆ ಋಷಿಯ ತನುಜೆ ದುಷ್ಯಂತನನು ವರಿಸಿ |
ಸೇರಿದುದನರಿತಂತೆ ಪೇಳ್ವೆ ವಿಸ್ತರಿಸಿ || ೧ ||

ಹರನನುಗ್ರಹವ ನಾಂ ಗಳಿಸಿಯಾದಿಯಲಿ |
ವಿರಚಿಸುವೆ ಯಕ್ಷಗಾನ ಪ್ರಬಂಧದಲಿ ||
ಇರುವುದಾದರೆ ವಿಷಮ ತಿದ್ದಿ ಬುಧರದನು |
ಮೆರೆಸುವುದು ಮೇದಿನಿಯೊಳೊಲವಿನಿಂದಿದನು || ೨ || || 14 ||

**ಸೌರಾಷ್ಟ್ರ - ತ್ರಿವುಡೆ**
ಅರಸ ಜನಮೇಜಯನು ಭಾರತ |
ವರ ಚರಿತ್ರವ ತನಗೆ ವರ್ಣಿಸು |
ತಿರುವ ವೈಶಂಪಾಯನನ ಪದ | ಕೆರಗಿ ನುಡಿದ || ೧ ||

ಮುನಿವರನೆ ಪೂರ್ವದಲಿ ಕೌಶಿಕ |
ಜನಪನಮಲ ಬ್ರಹ್ಮ ಋಷಿಯೆಂ |
ದೆನಿಸಿಕೊಂಡಂದವನು ಪೇಳಿಂ | ದೆನಗೆ ಮುದದಿ || ೨ ||

ಅವನ ಸುತೆ ದುಷ್ಯಂತರಾಯನ |
ಯುವತಿಯಾದಳದೆಂತು ತಿಳುಪೆನ |
ಲವನಿಪನ ಪಿಡಿದೆತ್ತಿ ಮುನಿಪುಂ | ಗವನು ನುಡಿದ || ೩ || || 17 ||

**ಭೈರವಿ - ಝಂಪೆ**
ಧರಣೀಂದ್ರ ಕೇಳಮೃತ | ಕರಕುಲದೊಳುದಭವಿಸಿ |
ದರಸ ಗಾಧ್ಯಾತ್ಮಜನ | ವರಚರಿತ್ರವನು || ೧ ||

ಮೇದಿನಿಯ ಪಾಲಿಸುತ | ಲಾ ಧೀರನಿರ್ದಯನು ಮ |
ಹೋದಯಾಂಕಿತಪುರದಿ | ಸಾಧುವೃತ್ತಿಯಲಿ || ೨ ||

ತೀರ್ಥಯಾತ್ರೆಯ ನೆವದಿ | ತೀರ್ಥವಿಡಿದೈದಿದನು |
ತೀರ್ಥಾಧಿಸೇನಶತ | ಪುತ್ರರೊಡನವನು || ೩ ||

ಪರಮೇಷ್ಠಿಸುತನೆಡೆಗೆ | ತಿರುಗುತ್ತೈತಂದವನ |
ಸುರಭಿಗೋಸುಗ ನೃಪತಿ | ಧುರವನೆಸಗಿದನು || ೪ ||

ಮುನಿ ಕೋಪಶಿಖಿಯಿಂದ | ಜನಪತಿಯ ಸಕಲಬಲ |
ತನುಜಶತ ಸಹಿತಳಿದು | ದನು ವರದೊಳಲ್ಲಿ || ೫ || || 22 ||

**ವಾರ್ಧಕ**
ಅರಸ ಕೇಳ್ ಬಳಿಕ ಹಿಮವತ್ಪಾರ್ಶ್ವಕೈತಂದು |
ಧರಣಿಪತಿಯುಗ್ರತಪದಿಂದೊಲಿಸಿ ರುದ್ರನಂ |
ಸುರನರೋರಗರೊಳಿಹ ಬಾಣಗಳನವನಿಂದ ಪಡೆದು ಬಂದಾ ಮುನಿಯನು ||
ಕರೆದಾಹವಂಗೈದು ಸೋತಖಿಳ ತೇಜದೊಳ್ |
ಹಿರಿದು ಬ್ರಾಹ್ಮಣಬಲಂ ತಾನಿನ್ನು ಬ್ರಹ್ಮರ್ಷಿ |
ವರನಾಗದಿರೆನೆಂದು ಛಲದ ಭಾಷೆಯನಾಡಿ ನಿಜನಗರಿಗೈತಂದನು || ೧ || || 23 ||

**ಮಧುಮಾಧವಿ - ತ್ರಿವುಡೆ**
ಬಳಿಕ ಕೇಳೆಲೆ ನೃಪತಿ ಕೌಶಿಕ |
ನುಳಿದ ಮಗನೋರ್ವನಿಗೆ ರಾಜ್ಯವ |
ಸಲಿಸಿ ನಿಜಸತಿಸಹಿತ ನಡೆದನು |
ಚಳಕದಿಂದಲಿ ವಿಪಿನಕೆ || ೧ ||

ಶಶಿಕುಲಜ ನಿಜಪುರದ ದಕ್ಷಿಣ |
ದಿಸೆಯೊಳಿಹ ವನದಲಿ ತಪಸ್ವಿನ |
ಲೆಸೆದನೊಂದು ಸಹಸ್ರ ವತ್ಸರ |
ಬಿಸಜಭವನನು ಭಜಿಸುತ || ೨ ||

ಜನಪಗೊಲಿದಜ ರಾಜ ಋಷಿಯಾ |
ಗೆನುತ ಪೋಗಲು ಬ್ರಹ್ಮ ಋಷಿಯಾ |
ದನಕ ತಾ ಬಿಡನೆಂದು ಮತ್ತವ |
ಘನತಪಸ್ವಿನೊಳಿರ್ದನು || ೩ || || 26 ||

**ಕಾಂಭೋದಿ - ಝಂಪೆ**
ಇತ್ತಲಿಂತಿರುವಾಗ | ಲತ್ತಲಾ ಸಾಕೇತ |
ಪತ್ತನದೊಳಖಿಳ ಜನ ಸಹಿತ ||
ಸತ್ಯದಲಿ ಧರೆಯನಾ | ಳುತ್ತಿರ್ದನರ್ಯಮ ಕು |
ಲೋತ್ತಮ ತ್ರಿಶಂಕುವೆಂಬಾತ || ೧ ||

ಒಂದು ದಿನ ಸಚಿವ ಸಖ | ಬಾಂಧವಾದಿಗಳಿಗಿಂ |
ತೆಂದನವನಿಂದು ಪರಿಯಂತ ||
ಕುಂದಿಲ್ಲದಿಹೆನಿನ್ನು | ನಿಂದೆಗೀಡಾದೆನಿದ |
ರಿಂದಲಳಿದುದು ಮನದ ಮಂತ್ರ || ೨ ||

ಯಾಗಶತಕವನು ಶತ | ಯಾಗ ಭೋಗಾನುಭವ |
ಕಾಗಿ ಮಾಡಿದೆನು ತನ್ನುಖದಿ ||
ಹೋಗಮೆನಗಾಗದಿರ | ಲಾಗಿ ಮದ್ಗುರುವಿಗೆ ಮ |
ನೋಗತವನುರುಹಿದೆನು  ನಯದಿ || ೩ ||

ಪ್ರತಿಕೂಲವನು ಧಾತ್ರ | ಸುತನು ಪೇಳಿದನೆನ್ನ |
ಮತಿಗಿನ್ನು ತತ್ತಪೋನಿಧಿಯ ||
ಸುತರು ಸರ್ವಜ್ಞರೀ | ಕ್ಷಿತಿಯೊಳಾನೈದಿ ಸ |
ದ್ಗತಿಗಾಂಬೆನವರ ಸನ್ನಿಧಿಯ || ೪ ||  || 30 ||

**ವಾರ್ಧಕ**
ಪುಣ್ಯಗಂಧಾದಿಸದ್ದ್ರುಮಗಳಿಂ ಭ್ರುಮಗಳಿಂ |
ಪುಣ್ಯಕರಮಾದ ಸುಸ್ಥಲಗಳಿಂ ಜಲಗಳಿಂ |
ಪುಣ್ಯಕಂಗೈವುತಿಹ ಮುನಿಗಳಿಂ ದನಿಗಳಿಂ ಮೆರೆವ ಮೃಗಸರಣಿಯಿಂದ ||
ಪುಣ್ಯಸಂಜಾತಪಂಕೇಜದಿಂ ತೇಜದಿಂ |
ಪುಣ್ಯವಾಸನೆಗೆರಗುವಳಿಗಳಿಂ ಗಿಳಿಗಳಿಂ |
ಪುಣ್ಯಜನಸಂಸ್ಥಿತಾಶ್ರಮಗಳಿಂ ರಮಗಳಿಂ ಋಷಿವಿಪಿನಮೆಸೆದಿರ್ದುದು || ೧ ||  || 31 ||

**ಕಂದ**
ಆ ವನದೊಳ್ ತಪದಿಂದೆಸೆ |
ವಾ ವಾಸಿಷ್ಠಾಂಘ್ರಿಗಳ್ಗೆ ವಂದಿಸಲರಸಂ ||
ಆ ವರಮುನಿಗಳ್ ಕಾಣುತ |
ಲಾ ವಾರಿಜಬಂಧುವಂಶಜಂಗಿಂತೆಂದರ್ || ೧ ||  || 32 ||

**ಶಂಕರಾಭರಣ – ತ್ರಿವುಡೆ**
ಎಲೆ ಮಹೀಶ್ವರತಿಲಕ ಸದ್ಗುಣ |
ಜಲಧಿ ನೀನೆಮ್ಮಲ್ಲಿಗೆ ||
ಬಳಲಿ ಬಂದುದು ಚಿತ್ರವೆನ್ನುತ | ತಿಳಿವುದೆಮಗೆ || ೧ ||

ಅಷ್ಟಭಾಗ್ಯ ಸಮೃದ್ಧನಾಗಿಹೆ |
ದಿಟ್ಟ ನಿನ್ನಲಿ ಹಿತವನು ||
ಇಟ್ಟು ಪಾಲಿಸುತೆಮ್ಮ ಜನಕ ವ | ಸಿಷ್ಠನಿಹನು || ೨ ||

ಹೀಗಿರಲು ನಮ್ಮಿಂದಲೇ ನಿನ |
ಗಾಗುವುಜ್ಜುಗಮಾವುದು ||
ಬೇಗ ಹೇಳೆನಲೆಂದನಾ ನೃಪ | ನಾಗ ಮಣಿದು || ೩ ||  || 35 ||

**ಸಾರಂಗ - ಆದಿ**
ಲಾಲಿಸೈ ಗುರು | ಬಾಲಕರಿರ ನಾಂ |
ಪೇಳುವ ವಚನವನು ||
ಬಾಲತನದ ವಾಗ್ಜಾಲಮಿದೆನ್ನುತ |
ತಾಳದೆ ದುಗುಡವ ಪಾಲಿಪುದೆನ್ನನು || ಪ ||
ಕ್ಷಿತಿಯನು ಧರ್ಮ | ಸ್ಥಿತಿಯಿಂದಾಳ್ವುದು |
ಪ್ರತಿ ನೃಪರಿಗೆ ವಿಹಿತ ||
ಕೃತಿಯಲ್ಲದೆ ವಸುಮತಿಗೆ ವಿಶೇಷ |
ಸ್ಥಿತಿಯಾಗಿರದೆನುತ ||
ಮತಿಯೊಳರಿತು ಸಂ | ಯುತ ಕಾಯದಿ ಸುರ |
ಪತಿಪುರಿಯನು ಸೇರ್ದತಿಯಶನಹೆನೆಂ |
ಬತಿ ಹರುಷದಿ ಮಖ | ಶತವೆಸಗಿದೆ ನಾ |
ಕ್ರತುಗಳೆನಗೆ ಪರ | ಗತಿಯೊಡಲಿಲ್ಲವು || ಲಾಲಿಸೈ || ೧ ||

ನೊಂದು ಬಳಿಕ ವಿಧಿ | ನಂದನನೊಡನಿ |
ನ್ನೊಂದು ಮಹಾಧ್ವರವ ||
ಚಂದದೊಲಿದೆನ್ನಿಂದಲಿ ಮಾಡಿಸು |
ತಿಂದ್ರಪುರವ ಹೊಗುವ ||
ಅಂದವ ತೋರೆನ | ಗೆಂದರೆ ಗುರು ತ |
ನ್ನಿಂದಾಗುವುದ | ಲ್ಲೆಂದೆನಲಿಲ್ಲಿಗೆ |
ಬಂದೆನು ಮನ್ಮನ | ದಂದವ ಸಲ್ಲಿಸಿ |
ರೆಂದೆನಲಾ ಮುನಿ | ನಂದನರುಸಿರ್ದರು || ಲಾಲಿಸೈ || ೨ ||  || 37 ||

**ಪಂತುವರಾಳಿ - ಮಟ್ಟೆ**
ಆಗದಾಗದಾಗದಾಗದು | ನಿನ್ನ ಮನೆಗೆ |
ಪೋಗು ಪೋಗು ಪೋಗು ಪೋಗಿದು || ಪ ||
ಹೀಗೆ ಪಿತೃವಿಯೋಗಕಾರ್ಯ | ಮಾಗಿರಲ್ಕೆ ಹೇಗೆ ನಿನ್ನ |
ಯಾಗದೀಕ್ಷೆಗೀಗ ಗುರುಗ | ಳಾಗಲಪ್ರಯೋಗ ಕೃತಿಗೆ || ಅ.  ಪ. ||
ಸುಕೃತ ದುಷ್ಕೃತಗಳ ಫಲಗಳು | ತಾವೆ ಬಹವು |
ವಿಕಟಬಲನೆ ನೀನು ಮೊದಲೊಳು ||
ಅಕುಟಿತಲತೆಯೊಳಮರಪುರದ | ಸುಖಕೆ ಹೇತುವಹಪ್ರಭೂತ |
ಸುಕೃತಿಗೈದುದಿರ್ದೊಡದರ | ಪ್ರಕೃತಿಯಿಂದ ದೊರಕಬೇಕು || ಆಗ || ೧ ||

ನಿನ್ನಲ್ಲಿಲ್ಲ ಪೂರ್ವಜನ್ಮದ | ಪುಣ್ಯವೆಂಬು |
ದನ್ನು ತಿಳಿದೆವೀಗಳಿನ್ನದ ||
ಎನ್ನಲೇಕೆ ನೂರು ಯಜ್ಞ | ವನ್ನು ಗೈದೊಡೇನು ನಾಕ |
ವನ್ನು ಪಡೆವಡಜನ ಲಿಖಿತ | ನಿನ್ನ ಹಣೆಯೊಳಿಲ್ಲವಯ್ಯ || ಆಗ || ೨ ||  || 39 ||

**ಘಂಟಾರವ - ಅಷ್ಟ**
ಮುನಿಗಳಿಂತೆನೆ ಕೇಳುತ್ತಲವನಿಪ |
ಮುನಿದು ಮುನಿಸನು ಮನದೊಳಡಗಿಸಿ |
ವಿನಯದಿಂದಿಂತೆಂದನು || ೧ ||

ಎಲೆ ಮುನೀಂದ್ರರೆ ಕುಲಗುರುಸುತರೆಂದು |
ತಿಳಿದು ನಿಮ್ಮೆಡೆಗೊಲಿದು ಬಂದರೆ |
ಹಲವು ಮಾತನು ಪೇಳ್ವಿರೆ || ೨ ||

ಸರ್ವಶಾಸ್ತ್ರಜ್ಞರಾವೆಂದು ಮನದಲ್ಲಿ |
ಗರ್ವಿಸುವಿರಿನ್ನೂರ್ವಿಯೊಳಗೆನ |
ಗೋರ್ವನೂ ದಯೆದೋರನೆ || ೩ ||

ಆತನಿಂದ ಮಹಾಧ್ವರವನು ಮಾಡಿ |
ಪೂತನಹೆನೆಂಬಾತಗಾ ಗುರು |
ಜಾತರೆದ್ದಿಂತೆಂದರು || ೪ || || 43 ||

**ವಾರ್ಧಕ**
ಭಾಪುರೆ ನೃಪಾಲ ಪ್ರತಾಪಿ ತ್ರಿಶಂಕು ತವ |
ರೂಪದವನೀಶ್ವರರನೀ ಪೊಡವಿಯೊಳ್ ಕಾಣೆ |
ವೈ ಪೂರ್ವದಿಂದ ನಿನ್ನೀ ಪತಂಗಾನ್ವಯದ ಭೂಪರ್ಗೆ ಗುರುಗಳಾಗಿ ||
ವ್ಯಾಪಿಸಿರ್ದೆಮ್ಮನುಳಿದೀ ಪರಿಯೊಳನ್ಯರಂ |
ನೀ ಪರಿಗ್ರಹಿಸುವೆಯೆಲಾ ಪಿಸುಣ ಚಂಡಾಲ |
ರೂಪನಾಗಿನ್ನೆನುತ ಕೋಪದಿಂದರಸಂಗೆ ಶಾಪವಂ ಕೊಟ್ಟರವರು || ೧ || || 44 ||

**ಸಾಂಗತ್ಯ - ರೂಪಕ**
ಬಳಿಕ ಶಾಂತತೆಯನ್ನು ತಳೆದರಂದವರಷ್ಟ |
ರೊಳಗವನಿಪನ ಸರ್ವಾಂಗ ||
ಹೊಳೆವ ಮುಕುಟ ಥಳಥಳಿಪ ಭೂಷಣ ಸಹ |
ಸಲೆ ಕೃಷ್ಣವರ್ಣವಾಯ್ತಾಗ || ೧ ||

ಅರಸನಾಗಲೆ ತನ್ನ ಪುರಕೆ ದುಮ್ಮಾನದಿ |
ಬರೆ ಬಾಗಿಲಲಿ ಚಾರರವನ ||
ಧರಣೀಶನೆಂಬುದನರಿಯದೆ ತಡೆಯಲ್ಕೆ |
ಕೆರಳುತೆಂದನು ಭೂಪರತುನ || ೨ || || 46 ||

**ತೋಡಿ - ಏಕ**
ಮರುಳು ದ್ವಾರಪಾಲಕರಿರ | ಕುರುಡರೆ ನೀವೆಲ್ಲ |
ಅರಿಯದಾವನೆಂಬ ಪರಿಯ | ಬರಿದೆ ತಡೆದಿರಲ್ಲ ||
ತೆರಳಿರತ್ತಲೆನ್ನೊಳ್ ನಿಮಗೆ | ಸರಸವಾಕ್ಯವೇನು |
ಅರಮನೆಯನು ಹೊಗುವೆನೀಗ | ತ್ವರಿತದಿಂದ ನಾನು || ೧ ||

ನಿಲಯದೊಳಗೆ ನಿನಗೆ ದೊಡ್ಡ | ಕೆಲಸವಿರ್ಪುದೇನು ||
ಕಲಿಗಳಂತೆ ಗರ್ವದಿಂದ | ಗಳಹುತಿರ್ದೆ ನೀನು ||
ಬಲುಮೆಯಿಂದ ಪೀಡಿಸಿದರೆ | ತಲೆಯ ಬಡಿವೆವಿಂದು |
ಹೊಲೆಯ ನೀನು ಮುಟ್ಟಬೇಡ | ತಿಳುಹು ದೂರ ನಿಂದು || ೨ || || 48 ||

**ಭೈರವಿ - ಝಂಪೆ**
ದ್ವಾರಪಾಲಕರೆಂದ | ಕ್ರೂರವಾಕ್ಯಕೆ ನಿಜ ಶ |
ರೀರವನು ಪರಿಕಿಸಿದ | ನಾ ರಸೇಶ್ವರನು || ೧ ||

ಕಂಡು ಸರ್ವಾಂಗದಲಿ | ಚಂಡಾಲವರ್ಣವನು |
ಮಂಡೆದೂಗುತ ಚಿಂತೆ | ಗೊಂಡನಾ ನೃಪನು || ೨ ||

ಚರರಿಗೆ ತ್ರಿಶಂಕು ಬಂ | ದಿರುವನೆಂದಾತ್ಮಭವ |
ಗರುಪಿ ಕರೆತನ್ನಿರೆಂ | ದರಸ ನೇಮಿಸಿದ || ೩ ||

ಬಂದು ಚಾರಕರು ನೃಪ | ನಂದನ ಹರಿಶ್ಚಂದ್ರ |
ಗಂದು ವಂದಿಸುತಲಿಂತೆದರಾ ಕ್ಷಣದಿ || ೪ || || 52 ||

**ಮುಖಾರಿ - ಏಕ**
ಭೂಪಾಲತನುಜ ಲಾಲಿಸಯ್ಯ | ಮಾರ್ತಂಡಕುಲಾರ್ಯ |
ಭೂಪಾಲತನುಜ ಲಾಲಿಸಯ್ಯ || ಪ ||
ಹೊಲೆಯನೋರ್ವ ಹೊರಗೆ ಬಂದು |
ನಿಲಯವಿದನು ಹೊಗುವೆನೆಂದು ||
ಕಲಿತನದೊಳಗೆ | ಮೊಳವೇನೆಂಬುದ | ತಿಳಿಯದೆ ತನ್ನ |
ಗಳಿಕೆಯ ತೋರ್ದನು || ಭೂಪಾಲ || ೧ ||

ತಡೆದೆವವನ ದ್ವಾರದಲ್ಲಿ | ಜಡಿದು ಕಜ್ಜವಾವುದಿಲ್ಲಿ ||
ನುಡಿಯದೆ ಬಿಡೆವೊಳ | ಗಡಿಯಿಡುವಡೆ ಫಡ |
ಫಡಯೆನುತೊಡನಾವ್ | ಘುಡುಘುಡಿಸುತ್ತಲಿ || ಭೂಪಾಲ || ೨ ||

ದುರುಳತನವ ಮಾಳ್ಪರಿಂದು | ಧರಣಿಪ ತ್ರಿಶಂಕುವೆಂದು ||
ಅರಿಯಿರೆ ಎನುತವ | ಜರೆವುತಲೆಮ್ಮೊಡ |
ನರುಹಿದ ನಿನ್ನನು | ಕರೆತಹುದೆನ್ನುತ || ಭೂಪಾಲ || ೩ || || 55 ||

**ತೋಡಿ - ಅಷ್ಟ**
ಎನಲಾ ಮಾತನು ಕೇಳುತ್ತ | ಹರಿಶ್ಚಂದ್ರ |
ಮನದಿ ಚೋದ್ಯವ ತಾಳುತ್ತ ||
ಜನಕ ತ್ರಿಶಂಕುವೆಂದೆನಿಪ ನಾಮೋಚ್ಚಾರ |
ವನು ಕೇಳಿದುದರಿಂದ ಘನ ಹರುಷದೊಳಿದ್ದ || ೧ ||

ಭರದಿಂದ ನಡೆದವನು | ತ್ರಿಶಂಕು ಭೂ |
ವರನ ಸರ್ವಾಂಗವನು ||
ಪರಿಕಿಸೆ ಚಂಡಾಲಪರಿಕರಮಲ್ಲದೆ |
ಧರಣಿಪಾಲಕನೆಂಬುದರಿಯಲಿಲ್ಲಾತಗೆ || ೨ ||

ಭೂರಿಸಂಶಯದೊಳಂದು | ನಿಂದಿರಲವ |
ನಾ ರೀತಿಯನು ತಿಳಿದು ||
ಆ ರಾಯನಾದುದನೋರಂತೆ ನೆನೆದು ಕು |
ಮಾರಗೆಂದನು ಮಿತಿಮೀರಿದ ಶೋಕದಿ || ೩ || || 58 ||

**ಭೋಗಷಟ್ಪದಿ - ಮಟ್ಟೆ**
ತನಯ ನಿನ್ನ ಚಿತ್ತದೊಲವ |
ಮನದೊಳರಿತೆನೇನ ಮಾಡ |
ಲೆನಗೆ ಬಂದ ಬವಣೆಯನ್ನು ನಿನಗೆ ಪೇಳ್ವೆನು ||
ಘನಶತಾಧ್ವರಗಳ ಫಲವ |
ನೆನಗೆ ಕೊಡಿಸಿರಿಪ್ಪಿಮುಖದೊ |
ಳೆನುತ ಗುರಸುತರ್ಗೆ ನುಡಿದೆ ವಿನಯದಿಂದಲಿ || ೧ ||

ನಿನ್ನ ಪಣೆಯೊಳಿಲ್ಲ ನಾಕ |
ವನ್ನು ಪಡೆವುದೆನುತ ಗುರುಜ |
ರೆನ್ನ ಜರೆಯಲದಕೆ ನುಡಿದೆನೆನ್ನ ಕಾರ್ಯವ ||
ಅನ್ಯರಿಂದ ಮಾಳ್ಪೆನೀಗ |
ಳೆನ್ನಲವರು ಹೊಲೆಯನಂಗ |
ವನ್ನು ಪಡೆಯೆನುತ್ತ ಶಾಪವನ್ನು ಕೊಟ್ಟರು || ೨ ||

ಗುರುಕುಮಾರಶಾಪದಿಂದ |
ಹರಿದುದೆನ್ನ ಕೀರ್ತಿಮಾಲೆ |
ಧರೆಯೊಳಿರುವ ಮರ್ತ್ಯರೆನ್ನ ಜರೆವುದಾಯಿತು ||
ಕೊರತೆಗವಧಿಯಿಲ್ಲವೆನಗೆ |
ಮರಣವೇಕೆ ಬಾರದಕಟ |
ಹರ ಹರೆನುತ ಹಲುಬಿ ಧರಣಿಗುರುಳಿ ಬಿದ್ದನು || ೩ ||  || 61 ||

**ಭಾಮಿನಿ**

ಅನಿತರಲಿ ಕೇಳರಸ ತನ್ನೃಪ |
ತನಯನೀಕ್ಷಿಸುತವನ ವಚನಾ |
ನನ ವಿರೋಚನ ಸುಪ್ರಭಾವಗಳಿಂದ ಪಿತನೆಂದು ||
ಮನದಿ ನೆಲೆಯನು ಮಾಡಿ ಮರುಗುವ |
ಜನಕನನು ಕಂಡೊದಗಿದಾಪ |
ತ್ತಿನಲಿ ಧೈರ್ಯವೆ ಪ್ರಬಲವೆನುತಿಂತೆಂದನವನಿಪಗೆ || ೧ ||  || 62 ||

**ಮಾರವಿ - ಏಕ**

ಎಲೆ ತಾತನೆ ನೀ | ನಳಲುವೆಯೇತಕೆ |
ಫಲವೇನಿದರೊಳಗೆ ||
ಜಲರುಹಭವ ಪಣೆ | ಯಲಿ ಬರೆದಂದದಿ |
ಫಲಿಸುವುದೆಲ್ಲರಿಗೆ || ೧ ||

ಬಿಡು ಶೋಕವ ನಾಂ | ಪಿಡಿದಾ ಗುರುಸುತ |
ರಡಿಗಳ ತನ್ನೃಖಿದಿ ||
ಬಿಡಿಸುವೆ ನಿನ್ನನು | ಹಿಡಿದೀ ರೂಪವ |
ಕೊಡು ನೇಮವ ಮುದದಿ || ೨ ||

ವರ ಮುನಿಗಳು ಧಿ | ಕ್ಕರಿಸಿದರೆನ್ನನು |
ತೆರಳ್ವಡವಿಗೆ ನಾನು ||
ವಿರಚಿಸಿ ತಪವನು | ಶರಜಭವಾದ್ಯರ |
ಕರುಣವ ಪಡೆದಪೆನು || ೩ ||

ಮುಂದೆಮಗತಿಶಯ | ದಿಂದಿಹುದಿರ್ದೊಡೆ |
ಬಂದಪುದವರಿಂದ ||
ಕುಂದಿದೊಡೇನಹು | ದೆಂದೆನೆ ಸುತಗಿಂ |
ತೆಂದನು ಧರಣೀಂದ್ರ || ೪ ||  || 66 ||

**ಸೌರಾಷ್ಟ್ರ - ಅಷ್ಟ**

ಸೈರಿಸು ನಿನ್ನಯ | ಧೈರ್ಯಕ್ಕೆ ಮೆಚ್ಚಿದೆ | ಕಂದ ಕೇಳು || ಪರಿ |
ಹಾರವಾಯ್ತೆನ್ನಯ | ಭೂರಿ ವ್ಯಸನವಿಂದು | ಕಂದ ಕೇಳು || ೧ ||

ದಾರಿಯಹುದು ನೀನು | ತೋರಿದುದಾದರೆ | ಕಂದ ಕೇಳು || ಕೃಪೆ |
ಬಾರದಿನ್ನೆನ್ನ ಮೇ | ಲಾ ಋಷಿಸುತರಿಗೆ | ಕಂದ ಕೇಳು || ೨ ||

ನಳಿನಭವಾದ್ಯರ | ನೊಲಿಸುವ ಕಾರ್ಯವು | ಕಂದ ಕೇಳು || ಅದು |
ಸುಲಭವಲ್ಲಿನ್ನೊಂದ | ತಿಳಿದು ಪೇಳುವೆ ನಾನು | ಕಂದ ಕೇಳು || ೩ ||

ಬಲಶಾಲಿ ರಾಜರ್ಷಿ | ತಿಲಕ ಕೌಶಿಕನೆಂದು | ಕಂದ ಕೇಳು || ಜನ |
ವೊಲಿದು ಪೇಳುವರೈದಿ | ತಿಳುಹುವೆನಾತಗೆ | ಕಂದ ಕೇಳು || ೪ || || 70 ||

**ಭಾಮಿನಿ**
ತರಳ ಕೇಳಾ ಮುನಿಯೆನಗೆ ನಿ |
ಷ್ಕರುಣವನು ತೋರಿಸಿದೊಡಾನೇ |
ವರ ತಪೋವನಕೈದಿ ತಪದಲೆ ಪಡೆವೆ ಸದ್ಗತಿಯ ||
ಧರಣಿಯಾಶೆಯನಾದಿಯಲಿ ತೊರೆ |
ದಿರುವೆನದರಿಂದಿನ್ನು ನೀನೇ |
ಧರೆಯನಾಳ್ವುದು ಸರ್ವಸಮ್ಮತವೆಂದು ಬೋಧಿಸಿದ || ೧ || || 71 ||

**ನೀಲಾಂಬರಿ - ಏಕ**
ಅವನೀಶನಿಂತೆಂದಾ | ಕುವರನ ನಿಲಿಸುತ್ತಾ |
ದಿವಸವ ತನ್ನಯ | ಭವನದೊಳ್ ಕಳೆದು ||
ರವಿಯುದಯದೊಳಾತ್ಮ | ಭವಗೆ ರಾಜ್ಯಾಧಿಪ |
ತ್ಯವನಿತ್ತು ಸಚಿವರಾ | ಸ್ಯವ ನೋಡಿ ನುಡಿದ || ೧ ||

ತರಳನೆನ್ನಯ ಮಗ | ಕರುಣವನಿವನ ಮೇ |
ಲಿರಿಸಿ ನೀವಿವನಿಂದೀ | ಧರೆಯನಾಳಿಸುತ ||
ಇರುವುದೆಂದುಸಿರಿ ಮೇಣ್ | ತರಳಗೆ ನೃಪಧರ್ಮ |
ದಿರವನೆಲ್ಲವ ಪೇಳಿ | ಪೊರಟನಲ್ಲಿಂದ || ೨ ||

ತನಗಾದ ಹೀನತೆ | ಯನು ನೆನೆನೆನೆವುತ |
ಲನುಪಮ ಬಲನೈದಿ | ವನಜಪೀಠನನು ||
ಮನದಲ್ಲಿ ಭಜಿಸುತ್ತ | ವನದೊಳಾತ್ಮಜ ಶಿಷ್ಯ |
ಜನಿತಸೌಖ್ಯದೊಳಿರ್ಪ | ಮುನಿಯ ನೋಡಿದನು || ೩ || || 74 ||

**ಸಾಂಗತ್ಯ - ರೂಪಕ**
ದಿನಪತೇಜದ ಗಾಧಿತನಯನಂಘ್ರಿಯ ಕಂಡು |
ಜನಪನಾತಗೆ ಬಲ ಬಂದು ||
ಘನಭಕ್ತಿಯಿಂದ ವಂದನೆಗೈದು ನಿಲಲಾಗ |
ಮುನಿಯುಸಿರಿದನು ಕಂದೆರೆದು || ೧ ||

ದೂರ ನಿಲ್ಲೆಲವೋ ನೀನಾರು ಚಂಡಾಲ ಶ |
ರೀರದಿಂದಿಹೆ ನಿನ್ನ ಪ್ರಕೃತಿ ||
ವೀರರಂತಿಹುದು ತತ್ಕಾರಣವೇನೆನ |
ಲಾ ಋಷಿಗೆಂದನಾ ನೃಪತಿ || ೨ ||

ಖ್ಯಾತ ತ್ರಿಶಂಕು ಸಾಕೇತಾಧಿನಾಥ ಖ |
ದ್ಯೋತವಂಶಜನು ತಾನೆನುತ ||
ಆತನರುಹೆ ಮುನಿ ಯಾತಕೀ ನೀಚತ್ವ |
ಜಾತವಾಯ್ತೆನೆ ಪೇಳ್ದನಾತ || ೩ || || 77 ||

**ಕಾಂಭೋದಿ - ಆದಿ**
ಕೇಳು ಕುಶನಾಭಜಾತಸಂಜಾತ |
ಆಲಸ್ಯಗೊಳದೆನ್ನ ಮಾತ ವಿಖ್ಯಾತ || ಕೇಳು || ಪ ||
ವರಕ್ರತುಶತವನ್ನು ಮಾಡಿ ಬಳಿಕ ನಾನು |
ನರತನುಸಹಿತೈದಿ ಸುರಪತಿಪುರದಿ ||
ಇರುವಡೆನ್ನಿಂದೊಂದು ಮಖವ ಮಾಡಿಸಿರೆಂದು |
ಅರುಹಿದೆ ಗುರುಗಳ್ಗೆ ಮಣಿದವರಡಿಗಳ್ಗೆ || ೧ ||

ಅವರು ಧಿಕ್ಕರಿಸಿದರೆನ್ನ ನುಡಿಯನಿದ |
ನವರ ಸುತರು ಪೇಳ್ದರವರುಸಿರಿದುದ ||
ತವಕದೊಳ್ ಪರರನ್ನು ಕರೆದು ಮಾಡುವೆನೆನು |
ತವರೊಡನುಸಿರ್ದೆನು ಮೂಢಮಾರ್ಗದೊಳಾನು || ೨ ||

ಕೇಳಿ ಶಪಿಸಿದರು ಚಂಡಾಲನಾಗಿರು |
ಖೂಳಯೆಂದೆನ್ನನು ಬಳಿಕವರಾನು ||
ತಾಳಿದೀ ರೂಪನು ದುಗುಡದಿ ಬಂದೆನು |
ಕಾಲ ಹಿಡಿವೆ ನಿನ್ನ ಕಾಯೊ ನೀನೊಲಿದೆನ್ನ || ೩ || || 80 ||

**ಭಾಮಿನಿ**
ಜನಪ ಜನಮೇಜಯನೆ ಕೇಳ್ಮೈ |
ಮುನಿವಸಿಷ್ಠನ ತತ್ಕುಮಾರರ |
ಘನತೆಯಂದವ ಕೇಳ್ದ ಮಾತ್ರದೊಳೆದ್ದು ಹೂಂಕರಿಸಿ ||
ನೆನೆದು ಪೂರ್ವ ದ್ವೇಷಕೃತಿಯನು |
ಕನಲಿ ಕಿಡಿಕಿಡಿಯಾಗಿ ಕೌಶಿಕ |
ಮುನಿ ಕಠೋರಧ್ವನಿಯೊಳಿಂತೆಂದನು ಮಹೀಶ್ವರಗೆ || ೧ || || 81 ||

**ಸೌರಾಷ್ಟ್ರ - ತ್ರಿವುಡೆ**
ಯಾಕೆ ಬೆದರುವೆ ನೃಪ ವಸಿಷ್ಠಗೆ |
ಲೋಕವೆಲ್ಲವು ಮಾರಿಹೋಯಿತೆ |
ಸಾಕು ಬಿಡು ನಿನ್ನಯ ಮನಸ್ಸಿನ | ಶೋಕವನ್ನು || ೧ ||

ಈ ಶರೀರವು ಸಹಿತ ನಾಕ ನಿ |
ವಾಸವನು ಮಾಡಿಸುವೆನಿದಕಮ |
ರೇಶಮುಖ್ಯರು ತಡೆದಡೆಯು ಬಿಡೆ | ನೈ ಸುಮತಿಯೆ || ೨ ||

ಹರನ ಕೃಪೆಯಜನೊಲುಮೆಯಮರಾ |
ದ್ಯರ ಶರಾವಳಿ ಕ್ಷಾತ್ರಭುಜಬಲ |
ವರತಪೋಧನವಿವುಗಳಿರಲೀ | ನರಿಯದೆನಗೆ || ೩ ||

ಗುರುವೆನಿಸಿ ನಿನ್ನಿಂದಲಮಲಾ |
ಧ್ವರವನೇ ಮಾಡಿಸುವೆನಿಲ್ಲಿಗೆ |
ಕರೆಸಿ ಋಷಿಗಳ ನಿಖಿಳ ವಸ್ತುವ | ತರಿಸಿಕೊಂಡು || ೪ || || 85 ||

**ಕಾಂಭೋದಿ - ತ್ರಿವುಡೆ**

ಅರಸಗಿಂತೆನುತವನು | ಭಾಷೆಯನಿತ್ತು |
ನೆರೆ ಪುಣ್ಯ ದಿವಸವನು ||
ಇರಿಸಿ ಯಜ್ಞಕೆ ಬೇಕಾ | ಗಿರುವ ವಸ್ತುಗಳನ್ನು |
ತರಿಸಿ ಸೇವಕರಿಂದ | ಧ್ವರಶಾಲೆಯನು ಕ್ರಮ |
ವರಿತು ಮಾಡಿಸಿ ನಿಖಿಳದೇಶದೊ |
ಳಿರುವ ಸುಜ್ಞಾಭಿಜ್ಞ ಸರುವೋ |
ತ್ಕರುಷ ಮುನಿಗಳನುಕ್ತದಿನದಲಿ |
ಕರೆಸಿದನು ನಿಜಶಿಷ್ಯರಿಂದಲಿ || ೧ ||

ಯೋಗಿಗಳಾಗಮದಿ | ಹಸನ್ಮುಖ |
ನಾಗಿ ಕೌಶಿಕನಂದದಿ ||
ಬೇಗ ಸತ್ಕರಿಸಿ ಬಂ | ದಾಗಮಜ್ಞರನು ತಾ |
ನಾಗಿ ತ್ರಿಶಂಕುವಿ | ಗಾಗಿರ್ದ ಗುರುಶಾಪ |
ಯೋಗ ವಿಷಯವನಾಗಲವರಿಗೆ |
ರಾಗದಲಿ ಪೇಳ್ದಾಗುವುಜುಗ |
ಕಾಗಿ ಕುಳಿತನು ಯಾಗಶಾಲೆಯ |
ಲಾ ಗರುವರೊಡನಾ ಗುಣಾಢ್ಯನು || ೨ ||  || 87 ||

**ವಾರ್ಧಕ**

ಧಾರಿಣೀಶ್ವರ ಕೇಳ್ ಸಮಿತ್ಕುಶತಿಲಂಗಳಂ |
ಕ್ಷೀರ ದಧಿ ಘೃತ ಮಧುರ ಮಧು ತಂಡುಲಂಗಳಂ |
ಚೀರಕರ್ಪೂರ ಮೃದು ರಂಭಾಫಲಂಗಳಂ ಕ್ರಮುಕ ತಾಂಬೂಲಗಳನು ||
ನಾರಿಕೇಳದ ಫಲಂಗಳನಗಣಿತಂಗಳಂ |
ಭೂರಿಧನಗಳನಿಂತು ಬಹು ಪದಾರ್ಥಂಗಳಂ |
ವೀರಮುನಿ ತರಿಸಿಕೊಂಡಾಗಮೋಕ್ತಂಗಳಂ ಸ್ಮರಿಸುತಾರಂಭಿಸಿದನು || ೧ ||  || 88 ||

**ಭಾಮಿನಿ**

ಬಳಿಕ ವಿದಿತಸುಮಂತ್ರದಲಿ ನಿ |
ರ್ಮಲ ಹೃದಯನನು ಮಾಡಿದನು ರವಿ |
ಕುಲಜನನು ದೀಕ್ಷಾಪವಿತ್ರವನಿತ್ತನಾತಂಗೆ ||
ತಿಳಿದು ವರಯಜ್ಞಾಂಗ ಕರ್ಮಂ |
ಗಳನು ಬಹು ಋಷಿಗಳಿಗೆ ಕೊಟ್ಟಪ |
ನೊಲಿದು ಯಾಜಕನಾದನೈ ತಾನಾ ಮಹಾಧ್ವರಕೆ || ೧ ||

ಅರಸ ಕೇಳ್ ಕುಂಡದಲಿ ವಹ್ನಿಯ |
ನಿರಿಸಿ ವಿವಿಧಾಹುತಿಯನಿಕ್ಕುತ |
ವರತಪೋನಿಧಿ ಕಶ್ಯಪಾದ್ಯರ ಮಂತ್ರಘೋಷದಲಿ ||
ಪರಮ ಋಷಿಯಾ ಮಖವ ಮಾಡು |
ತ್ತಿರಲು ತದ್ಭವ ಧೂಮ ಸುರಪನ |
ಪುರಕೆ ಕಾಣಿಸಿಕೊಂಡುದೇನೆಂಬೆನು ಮಹಾಧ್ವರವ || ೨ ||  || 90 ||

**ಸೌರಾಷ್ಟ್ರ - ತ್ರಿವುಡೆ**

ಅತ್ತಲಮರಾವತಿಯೊಳಮರರ |
ಮತ್ತೆ ದಿಕ್ಪಾಲಕರ ಪೊಗಳಿಕೆ |
ವೆತ್ತು ಸಭೆಯೊಳಗೆಸೆದನಂದಾ | ವೃತ್ರವೈರಿ || ೧ ||

ದಿವಿಜಗಣಿಕೆಯರಲ್ಲಿ ನೃತ್ಯೋ |
ತ್ಸವದಲಿರ್ದರು ನಿಲ್ಲದಲ್ಲಿಗೆ |
ಕವಿವ ಹೊಗೆಯನು ಕಾಣುತಾ ವಾ | ಸವನುಸಿರ್ದ || ೨ ||

ಲೋಕಪಾಲರು ಕೇಳಿರೆಮ್ಮೆಡೆ |
ಗೇಕೆ ಬರುತಿದೆ ಧೂಮ ಮರ್ತ್ಯ |
ನೀಕವೇಂಗೈವುತ್ತಿಹುದು ಭೂ | ಲೋಕದೊಳಗೆ || ೩ ||

ಅರಿಯೆನದನತ್ಯಂತ ವಿಸ್ಮಯ |
ಭರಿತನಾದೆನು ನೀವು ತಿಳಿದುದ |
ನರುಹಿರೆನಲಿಂತೆಂದನವಗಾ | ವರುಣನೆರಗಿ || ೪ ||  || 94 ||

**ಕೇದಾರಗೌಳ - ಅಷ್ಟ**
ಇಂದ್ರ ಕೇಳ್ ನರರೊಲ | ವಿಂದ ವಿಶೇಷಮಾ |
ದೊಂದು ಮಹೇಷ್ಟಿಯನು ||
ಇಂದಿಳೆಯಲಿ ಮಾಳ್ಪ | ರೆಂದು ತೋರ್ಪುದು ಬಹ |
ಗಂಧದಿ ತನಗೆಂದನು || ೧ ||

ಯಾಗಮಾದೆಡೆ ಹವಿ | ರ್ಭಾಗವನೆಮಗೀಯ |
ದಾಗುವುದೆಂತು ನೀನು ||
ಈಗ ಪೇಳಿದ ನುಡಿ | ತಾಗದು ತನಗೆಂದ |
ನಾಗಲರ್ಯಮಸುತನು || ೨ ||

ಮರ್ತ್ಯರೊಳಗೆ ತಾಪ | ಸೋತ್ತಮರಧಿಕ ಸ |
ಮರ್ಥರವರ ಕಾರ್ಯದ ||
ಸೂತ್ರವೇನೆಂಬುದು | ಗೊತ್ತೆಮಗಾಗದೆ |
ನುತ್ತ ವರುಣ ನುಡಿದ || ೩ ||  || 97 ||

**ಕಂದ**
ಅನಿತರೊಳಿತ್ತಲ್ ಕೌಶಿಕ |
ಮುನಿಪಾಲಂ ಹವ್ಯಭಾಗದಾನಕೆ ಕ್ರಮದಿಂ ||
ದನಿಮಿಷರಂ ಕರೆಯಲ್ಕದ |
ರನುವಂ ತಿಳಿದಾ ಬಲಾರಿ ಸಭಿಕರ್ಗೆಂದಂ || ೧ ||  || 98 ||

**ಕಾಂಭೋದಿ - ಅಷ್ಟ**
ತರಣಿಜಾದ್ಯರು ಕೇಳಿರಿತ್ತ | ಕಾಲ |
ಹರಣದುಕ್ತಿಯ ಬಿಡಿರತ್ತ ||
ಬರುವ ಧೂಮದ ಪರಿಕರವನ್ನು ತಿಳಿದೆನು |
ಧರೆಯೊಳೊಂದಾಶ್ಚರ್ಯಮಾದ |
ಧ್ವರವು ನಡೆವುತ್ತಿರುವುದೀಗಲು || ೧ ||

ತನುಸಹಿತೆಮ್ಮ ಲೋಕವನು | ಹೊಗ |
ಲನುಕೂಲವಾದ ಯಜ್ಞವನು ||
ವನದಿ ತ್ರಿಶಂಕುರಾಯನು ಕೌಶಿಕನ ಗುರು |
ತನದೊಳೆಸಗಿದನನುನಯದೊಳೆ |
ಮ್ಮನು ಹವಿಸ್ಸಿಗೆ ಮುನಿಪ ಕರೆದನು || ೨ ||

ಹೀಗೆಂದ ಶಕ್ರನ ಮಾತ | ಕೇಳು |
ತ್ತಾಗ ನುಡಿದನಿನಜಾತ ||
ಹ್ಯಾಗಾದರೇನೆಮ್ಮ ಭಾಗವ ಪಡೆಯಲಾ |
ವೀಗಳಲ್ಲಿಗೆ ಪೋಗದಿರೆ ಸರಿ |
ಯಾಗದೆನೆ ಶತಯಾಗನೆಂದನು || ೩ || || 101 ||

**ಕೇದಾರಗೌಳ - ಝಂಪೆ**
ಅಂತಕನೆ ನಿಜವರಿಯದೆ | ನೀನಜ್ಞ |
ರಂತೆ ನುಡಿಯದಿರು ಬರಿದೆ ||
ಭ್ರಾಂತನು ತ್ರಿಶಂಕುನೃಪನು | ದುರ್ಬುದ್ಧಿ |
ಮಂತನಾ ಗಾಧೇಯನು || ೧ ||

ಮುನಿಶಾಪದಿಂದರಸನು | ಚಂಡಾಲ |
ನೆನಿಸಿ ಯಜ್ಞಂಗೈದನು ||
ಜನಪತಿಗೆ ಗುರುವಾದನು | ನೃಪಕುಲಜ |
ನೆನಿಪ ವಿಶ್ವಾಮಿತ್ರನು || ೨ ||

ಅಕ್ರಮದ ಯಾಗಮಿದಕೆ | ಪೋಗುವುದು |
ಸಕ್ರಮವೆನಿಸದು ಮನಕೆ ||
ವಕ್ರಮಾದರೆ ಯೋಚಿಸಿ | ನೋಡೆನುತ |
ಶಕ್ರ ನುಡಿದನು ಗರ್ವಿಸಿ || ೩ || || 104 ||

**ಭಾಮಿನಿ**
ಹಂಸವೈರಿಯ ಮಾತ ಕೇಳುತ |
ಹಂಸಸಖಸಂಜಾತ ಮಾರುತ |
ಹಂಸರಮರವ್ರಾತ ಸಹಿತೊಪ್ಪಿರ್ದರಂದಿನಲಿ ||
ಹಂಸವಂಶಖ್ಯಾತ ಕೇಳಾ |
ಹಂಸಕುಲಸಂಭೂತನಿತ್ತಲು |
ಹಂಸಮುನಿಸಂಘಾತದಿದಿರಲಿ ಕೌಶಿಕಗೆ ನುಡಿದ || ೧ || || 105 ||

**ನಾದನಾಮಕ್ರಿಯೆ - ಅಷ್ಟ**
ಋಷಿಯೆ ಲಾಲಿಸು ಹವ್ಯಭಾಗಕ್ಕೆ | ಸುಮ |
ನಸರಾರು ಬರಲಿಲ್ಲ ಸ್ವರ್ಗಕ್ಕೆ ||
ಸಶರೀರನಾಗಿ ಪೋಪುದಕಿನ್ನು | ಆವ |
ವಿಷಮವಹುದೊ ತನಗೆಂದನು || ೧ ||

ಧಾತ್ರೀಶನಿಂತೆನೆ ಕೇಳುತ್ತ | ವಿಶ್ವಾ |
ಮಿತ್ರನಂಜದಿರೆಂದು ಹೇಳುತ್ತ ||
ಗೋತ್ರವೈರಿಯ ಮೇಲೆ ಮುಳಿವುತ್ತ | ಪೇಳ್ದ |
ಶ್ರೋತ್ರಿಯ ವರ್ಗವ ಕಾಣುತ್ತ || ೨ ||

ಮುನಿವರರೆಲ್ಲರುಮರಿದಿರೆ | ಹವ್ಯ |
ವನು ಕೊಡುವರೆ ನಾನು ಕರೆದರೆ ||
ಅನಿಮಿಷರೋರ್ವರು ಬರಲಿಲ್ಲ | ತಮ್ಮ |
ಘನತೆಯ ನಮಗೆ ತೋರಿದರಲ್ಲ || ೩ ||

ಆದರೇನಾಯ್ತು ಕಾಣಿಸುವೆನು | ಸುರ |
ಪಾದಿಗಳ್ಗಿನ್ನು ಸಾಹಸವನು ||
ಖೇದವೇನಿಲ್ಲೆಂದು ಮುನಿಪನು | ಪೂರ್ಣ |
ಗೈದನು ಕೈಕೊಂಡ ಕ್ರತುವನು || ೪ || || 109 ||

**ಭಾಮಿನಿ**
ಬಳಿಕ ಕೇಳ್ ನಿಜಮಂತ್ರಶಕ್ತಿಯೊ |
ಳಲಘುತರ ದಿನತೇಜದತಿ ನಿ |
ರ್ಮಲ ವಿಮಾನವನೊಂದ ಮಾಡಿ ತದಂತರಾಳದಲಿ ||
ನಿಲಿಸುತಾ ಭೂಪನನು ಕೌಶಿಕ |
ನೊಲಿದು ಸ್ವರ್ಗಂ ಗಚ್ಛ ಪಾರ್ಥಿವ |
ತಿಲಕಯೆನೆ ನೃಪಸಹಿತಲಾ ರಥವೈದಿತಂಬರವ || ೧ || || 110 ||

**ಮಾರವಿ - ಏಕ**
ಧರಣಿಪ ಕೇಳೀ | ಚರಿಯೆಯನಲ್ಲಿಹ |
ವರಮುನಿಗಳು ಕಡು | ಬೆರಗಿನಲೀಕ್ಷಿಸು |
ತಿರಲಾ ರಥವತಿ | ಭರದಲಿ ಹಾಯ್ದುದು |
ಮರುತನ ಹಿನ್ನೆಲೆ | ಗಿರಿಸುತ ನಭಕೆ || ಏನನೆಂಬೆ || ೧ ||

ಅತ್ತಲು ಮರ್ತ್ಯರ | ಮೊತ್ತಮಿದನು ಕಾ |
ಣುತ್ತ ವಿಚಿತ್ರಮಿ | ದೆತ್ತಣದೆನುತಿರ |
ಲಿತ್ತಲು ಹತ್ತಿತು | ಮತ್ತಾ ರಥ ಬಲ |
ಶತ್ರುವಿನುತ್ತಮ | ಪತ್ತನಕಾಗ || ಏನನೆಂಬೆ || ೨ ||

ಅಳುಕುತ ದಶದಿಗು | ವಲಯವ ನೋಡುತ |
ಮಲಿನಾಂಗದ ನೃಪ | ತಿಲಕನು ಬಹುದನು |
ತಿಳಿದು ಪುರಂದರ | ಮುಳಿದಿಂತೆಂದನು |
ಚಳಕದಿ ತನ್ನೆಡ | ಬಲವನು ನೋಡಿ || ಏನನೆಂಬೆ || ೩ || || 113 ||

**ಸೌರಾಷ್ಟ್ರ - ತ್ರಿವುಡೆ**
ಕಂಡಿರೇ ದಿಗಧೀಶರೆಲ್ಲರು |
ಚಂಡಮುನಿ ಕೌಶಿಕನು ತಾನು |
ದ್ವಂಡ ಭಟನೆಂಬುಬ್ಬಿನಲಿ ಕೈ | ಕೊಂಡ ಕೃತಿಯ || ೧ ||

ಶಾಪದಲಿ ಚಂಡಾಲನಾದ ಮ |
ಹೀಪತಿಯನೇರಿಸಿದನೆಮ್ಮೊಡೆ |
ಗಾ ಪಿಸುಣನೈತಂದನಿದೆಯಿದೆ | ಭಾಪು ಭಳಿರೆ || ೨ ||

ಮಂದಮತಿ ಈ ಹೊಲೆಯನಿಲ್ಲಿಗೆ |
ಬಂದು ಸುಖದಲಿ ಬಾಳ್ವರೆಮ್ಮನು |
ನಿಂದಿಸುತ ನಗದೇ ಜಗಜ್ಜನ | ವೃಂದವಿನ್ನು || ೩ ||

ನರರಹಂಕಾರವನು ನಮಗೀ |
ತೆರದಿ ತೋರಿದ ಮೇಲೆ ನಾವದ |
ಕೆರಡುಮಡಿಯನು ಮಾಡದಂಜುವ | ಪರಿಯದುಂಟೆ || ೪ ||

ನೂಕಿರೀತನನವನಿಗೆನುತಾ |
ನಾಕಪತಿ ಕೈವೀಸಲನಿತರೊ |
ಳೇಕಚಿತ್ತದೊಳಿದ್ದುದಮರಾ | ನೀಕವಿರದೆ || ೫ || || 118 ||

**ಭೈರವಿ - ತ್ರಿವುಡೆ**

ಏನನೆಂಬೆನು ಭೂಪ ಕಶ್ಯಪ |
ಸೂನು ಶಮನಾದಿಗಳು ಗರ್ಜಿಸಿ |
ಭಾನುತೇಜದ ರಥದೊಳೈತಹ |
ಮಾನವೇಂದ್ರನ ಪಿಡಿದು ಘಡ ಘಡ |
ಹೀನಭಾಗ್ಯ ದುರಾತ್ಮ ನೀನಭಿ |
ಮಾನಿಯೇ ಸುರಪುರದಲೆನುತನು |
ಮಾನಿಸದೆ ನೂಕಿದರು ತನ್ನೃಪ |
ನಾನನವನಡಿಮಾಡಿ ಧರಣಿಗೆ |
ಖ್ಯಾತಿಯಿಂದ | ವರ್ಜಿತ | ಭೀತಿಯಿಂದ || ೧ ||

ಧರೆಗೆ ಬೀಳುತ ಮಧ್ಯಮಾರ್ಗದ |
ಲರಸನತಿಶಯ ಭೀತಿಯಲಿ ಬಾ |
ಯ್ದೆರೆದು ಗಾಧಿಕುಮಾರಕನ ಕರೆ |
ಕರೆವುತಕಟಕಟೆನ್ನನವನಿಗೆ |
ಸುರರು ನೂಕಿದರಿನ್ನು ತನು ಜ |
ಜ್ಝರಿತವಹುದೀ ವ್ಯಥೆಯನಾರೊಡ |
ನೊರೆವೆನೇಗುವೆ ಕೆಟ್ಟೆನಯ್ಯೋ |
ಹರ ಹರಾ ಎನುತೊದರಿದನು ಸಂ |
ಕ್ಲೇಶದಿಂದ | ಘನತರ | ಘೋಷದಿಂದ || ೨ || || 120 ||

**ಭೈರವಿ - ಅಷ್ಟ**

ಅರಸನಿರವ ಕಾಣುತ್ತ | ಜಂಭಾರಿಮು |
ಖ್ಯರ ಮೇಲೆ ಕೋಪಿಸುತ್ತ ||
ಭರದಿ ಕೌಶಿಕ ತನ್ನ | ಕರವನಾಗಸಕೆತ್ತಿ |
ತರಣಿಕುಲಜಗೆಂದನು || ೧ ||

ಅಳಲಬೇಡರಸ ನೀನು | ತಪಸ್ವಿನ |
ಬಲವನ್ನು ತೋರ್ಪೆ ನಾನು ||
ನಿಲು ಬೀಳದೆಂದಲ್ಲಿ | ನಿಲಿಸುತಾತನ ಮುನಿ |
ಗಳಿಗೆ ತಾನಿಂತೆಂದನು || ೨ ||

ಇಂದ್ರನಸೂಯೆಯನು | ಕಂಡಿರೆ ಧರ |
ಣೀಂದ್ರಗೆ ನಾಕವನು ||
ಹೊಂದಗೊಡದೆ ಗರ್ವ | ದಿಂದ ನೂಕಿದನಿದು |
ಚಂದವೆ ಪೇಳಿರಯ್ಯ || ೩ ||

ಹೋಗಲಾ ಸ್ವರ್ಗವಿನ್ನು | ತತ್ಪುರಿಗೆಣೆ |
ಯಾಗಿ ಮಾಡುವೆನು ನಾನು ||
ಈಗ ದಕ್ಷಿಣದಿಗು | ಭಾಗದೊಳೆಂದೆನು |
ತಾಗಲಾ ಮುನಿ ಪೇಳ್ದನು || ೪ || || 124 ||

**ವಾರ್ಧಕ**
ಆ ಕೌಶಿಕಂ ತಪೋಬಲದಿಂದ ಬಳಿಕ ಧ್ರುವ |
ಲೋಕಮಂ ಸಪ್ತರ್ಷಿ ವರ್ಗಮಂ ತಾರಕಾ |
ನೀಕಮಂ ಸೃಜಿಸಿ ದಕ್ಷಿಣದಿಕ್ಕಿನೊಳ್ ನಿಲಿಸಿ ಮತ್ತೆ ಯಕ್ಷಾದಿಗಳನು ||
ಪಾಕಶಾಸನಮುಖ್ಯರಂ ನಿರ್ಮಿಸಿಟ್ಟು ನವ |
ನಾಕಮಂ ಮಾಳ್ಪೆನೆಂದಾರಂಭಿಸಲ್ಕಿಂದ್ರ |
ನಾ ಕಾರ್ಯಮಂ ತಿಳಿದು ಕಂಗಳೊಳ್ ಕಿಡಿಗೆದರಿ ತನ್ನವರೊಳಿಂತೆಂದನು || ೧ ||  || 125 ||

**ಪಂತುವರಾಳಿ - ಮಟ್ಟೆ**
ನೋಡಿರಿಳೆಯೊಳಾಹ ಕೃತ್ಯವ | ಮುಂದೆ ನಮಗೆ |
ಕೇಡು ಜನಿಸುವಂದವನ್ನು | ಮಾಡುತಿಹನು ಗಾಧಿಸುತನು || ನೋಡಿ || ಪ ||
ಕಲುಷಕಾಯನಾದ ನೃಪನ | ನಿಲಿಸಲಾಗಿ ದಕ್ಷಿಣಾಭ್ರ |
ದೊಳಗೆ ನಾಕಪುರವ ತಪದ | ಬಲದಲೆಸಗುತಿರ್ದನವನು || ನೋಡಿ || ೧ ||

ಈಗಲಾವು ಹೀಗೆ ಬರಿದೆ | ಕೂಗುತಿರ್ದೊಡಾಗದಲ್ಲ |
ಗಾಗಿ ಜವದಿ ಪೋಗಿ ಮುನಿಯ | ತಾಗಿ ನೋಳ್ಪುದೇ ಗುರುತ್ವ || ನೋಡಿ || ೨ ||  || 127 ||

**ಕಂದ**
ಎಂದಂತಕಮುಖ ಸುಮನಸ |
ಬೃಂದವನೊಡಗೊಂಡು ಭೂರಿಲೋಚನನಿಳೆಗಂ ||
ಬಂದಾ ಕೌಶಿಕನಿದಿರೊಳ್ |
ನಿಂದಿಂತೆಂದಂ ಗಂಭೀರ ನಿಸ್ವನದಿಂದಂ || ೧ ||  || 128 ||

**ಶಂಕರಾಭರಣ - ಮಟ್ಟೆ**
ಎಲೆ ತಪಸ್ವಿ ನಿನ್ನ ನಿಜದ | ಕೆಲಸವಾವುದೀಗ ಹಿಡಿದ |
ಛಲವಿದೇನು ವೈಪರೀತ್ಯ | ತಿಳುಹು ಜವದಲಿ ||
ಮಲಿನ ಸುಕೃತಿ ಈ ತ್ರಿಶಂಕು | ಖಳನ ನುಡಿಗೆ ಭ್ರಮಿಸಲೇಕೆ |
ತೊಲಗು ಸುಮ್ಮನೆನಲು ಮುನಿಪ | ಮುಳಿದುಸಿರ್ದನು || ೧ ||

ಈತ ವೀರ ಧೀರ ಭೂರಿ | ನೀತಿವಂತನೀ ತ್ರಿಶಂಕು |
ವೀತನಿರವನರಿಯದಾಡ | ಲೇತಕೆಂದನು ||
ಈತ ಗುರುಜಶಾಪದಿಂದ | ಜಾತಿಗೆಟ್ಟಮೇಲೆ ಸ್ವರ್ಗ |
ವೇತಕಿವಗೆನುತ್ತ ದೇವ | ನಾಥ ಪೇಳ್ದನು || ೨ ||

ನಿರಪರಾಧಿಗಳಿಗಜಾತ | ದುರಿತರಿಂಗೆ ಶಾಪದಿಂದ |
ಕೊರತೆ ಯಾವುದೆನುತ ಮುನಿಪ | ಕೆರಳಿ ನುಡಿದನು ||
ಕೊರತೆಯಿಲ್ಲದಿರ್ಪುದಾದ | ರರಸಗೀ ವಿಕಾರರೂಪ |
ಬರಲು ಹೇತುವೇನೆನುತ್ತ | ಸುರಪ ನುಡಿದನು || ೩ ||

ದುರಿತವಂಗ ಭೇದದಿಂದ | ಬರುವುದುಂಟೆ ನಾಕವೀವೆ |
ನರಸಗೆಂದ ನುಡಿಯ ತಪ್ಪ | ಲರಿಯೆನೆಂದನು ||
ಸುರರ ನಗರ ಗಾಧಿ ಮಾಡಿ | ಸಿರುವುದಲ್ಲ ನಿನ್ನ ಭಾಷೆ |
ಸರಿಯದಲ್ಲ ಬಿಡೆವಯುಕ್ತ | ಚರಿಯೆಗೆಂದನು || ೪ ||

ಫಡ ಸುರೇಂದ್ರ ನಿಲ್ಲು ಧುರಕೆ | ಪಡೆವೆನಿದರೊಳಮರಪುರವ |
ಕೊಡುವೆ ನೃಪತಿಗೆನುತ ಮುನಿಪ | ಘುಡುಘುಡಿಸುತಿರೆ ||
ಬಿಡನು ಛಲವನೀತನಿವನ | ನೊಡಬಡಿಸಲು ಬೇಕು ನಯದ |
ನುಡಿಯಲೆಂದು ವಾಸವಾದ್ಯ | ರೊಡನೆ ತಿಳಿದರು || ೫ ||  || 133 ||

**ಭಾಮಿನಿ**
ಭೂತಳೇಶ್ವರ ಕೇಳ್ ಬಳಿಕ ಪುರು |
ಹೂತಮುಖ್ಯರು ಮಿತ್ರಭಾವದ |
ಮಾತ ನಮ್ರತೆಯಿಂದಲುಸಿರಿದು ಕುಶಿಕನಂದನನ ||
ಖ್ಯಾತಿಯನು ಪರಿಹರಿಸಿ ತಮ್ಮಯ |
ರೀತಿಗೆಡದವಗಿತ್ತ ನಿನ್ನಯ |
ಮಾತು ತಪ್ಪದ ಪರಿಯನೊರೆವೆವೆನುತ್ತ ಪೇಳಿದರು || ೧ || || 134 ||

**ಕಾಂಭೋದಿ - ಝಂಪೆ**
ಋಷಿತಿಲಕ ನೀನು ನಿ | ರ್ಮಿಸಿದ ಸಕಲವು ನಿಲಲಿ |
ಕುಸಿಯದಿನ್ನದರ ಸನಿಹದಲಿ ||
ಶ್ವಸನಸಖಪಥದ ಹೊರ | ಗ ಸಮಬಲ ನೃಪನ ನಿ |
ಲ್ಲಿಸುವುದೆಂದರು ದಿವಿಜರಲ್ಲಿ || ೧ ||

ಎನೆ ತಥಾಸ್ತುವೆನುತ್ತ | ಲನಿಮಿಷರು ಪೇಳ್ವಂತೆ |
ಘನತೆಯಲಿ ಮಾಡಿ ಲೋಕವನು ||
ಮುನಿ ತ್ರಿಶಂಕುಸ್ವರ್ಗ | ವೆನುತ ಪೆಸರಿಟ್ಟವರೊ |
ಳಿನಕುಲೋದ್ಭವನನಿರಿಸಿದನು || ೨ |||

ಸುರರು ಬಳಿಕೈದಿದರು | ಪುರಕಿತ್ತ ಮುನಿ ತಪಕೆ |
ಕೊರತೆಯಹುದೀ ಸ್ಥಳದೊಳೆನುತ ||
ಅರುಹಿ ಬೀಳ್ಕೊಂಡು ಮುನಿ | ವರಿಯರನು ಪಶ್ಚಿಮಕೆ |
ಪೊರಟನಲ್ಲಿಂದ ಸತಿಸಹಿತ || ೩ || || 137 ||

**ದೇಶಿ - ಅಷ್ಟ**
ಕೇಳಯ್ಯ | ಭೂಪ | ಕೇಳಯ್ಯ || ಪ ||
ಕೇಳಯ್ಯ ವಿಶ್ವಾಮಿತ್ರನ ಸಾಹಸವನು |
ಪೇಳುವೆನಿನ್ನು ಮುಂದಣ ಚರಿತವನು || ಅ. ಪ . ||
ತ್ವರಿತದೊಳೈದಿ ಪಶ್ಚಿಮದ ದಿಕ್ಕಿನಲಿ |
ಮೆರೆವ ಪುಷ್ಕರವೆಂಬ ನದಿಯ ಬಳಿಯಲಿ ||
ಇರುವ ಕಾನನದಲ್ಲಿ ಕಮಲಪೀಠನನು |
ಸ್ಮರಿಸುತ್ತಲಿರ್ದನಾ ಗಾಧಿನಂದನನು || ಕೇಳಯ್ಯ || ೧ ||

ವರುಷಸಹಸ್ರದೊಳಜನಲ್ಲಿ ಬಂದು |
ಕರೆದು ಕೌಶಿಕನಿಗೆ ಋಷಿಯಾದೆಯೆಂದು ||
ತೆರಳಲು ಬ್ರಹ್ಮರ್ಷಿಯಾಗಬೇಕೆಂದು |
ಮರಳಿ ತಪದಲಿರ್ದನಾ ಮುನಿಯಂದು || ಕೇಳಯ್ಯ || ೨ ||

ಅತ್ಯುಗ್ರತಪವನಾಚರಿಸಿದನವನು |
ಮುತ್ತಿತು ತಜ್ಜ್ವಾಲೆ ದೆಸೆದೆಸೆಗಳನು ||
ಅತ್ತಲು ಸುರರೆಲ್ಲ ಬೆಂದತಿ ಭಯದಿ |
ಗೋತ್ರಾರಿಯೆಡೆಗೈದಿ ಪೇಳ್ದರು ನಯದಿ || ಕೇಳಯ್ಯ || ೩ || || 140 ||

**ಮಾರವಿ - ತ್ರಿವುಡೆ**
ದೇವದೇವನೆ ಕೇಳೊ ಬಿನ್ನಪವ |
ನಾವು ಬದುಕೆವು ಸಾವು ಬಾರದು |
ಭಾವಿಸುವಡರಿದೀ ವಿಶೇಷವ || ಪ ||
ಹೊಟ್ಟೆಯುಬ್ಬೇರುತಿಹುದೆಮಗೆಲ್ಲ |
ಕಟ್ಟುತಿರ್ದುದು ಶ್ವಾಸ ಸುಳ್ಳಲ್ಲ |
ಅಟ್ಟುತಿರ್ದುದು ತಾಪವಿದೆಲ್ಲ ||
ಕಷ್ಟವಾವುದಕೊಟ್ಟುಗೂಡಿತೊ |
ಬಟ್ಟೆಯರಿಯದು ದೃಷ್ಟಿಯುರಿವುದು || ದೇವ ದೇವನೆ || ೧ || || 141 ||

**ಕೇದಾರಗೌಳ - ಅಷ್ಟ**
ಸುರರೆಂದ ಮಾತಿಗೆ | ಸುರಪಾಲ ನುಡಿದನು |
ಧರೆಯಲ್ಲಿ ಕೌಶಿಕನು ||
ವರತಪವನು ಮಾಡು | ತಿರುವನು ತಜ್ಜ್ವಾಲೆ |
ಯುರುಬೆ ಬಾಧಿಪುದೆಮ್ಮನು || ೧ ||

ಇದಕೊಂದುಪಾಯವ | ನೊದಗಿಸಿದಪೆನೀಗ |
ಬೆದರಲೇಕೆನುತಲ್ಲಿಗೆ ||
ಚದುರೆ ಮೇನಕೆಯ ತಾ | ನೊದಗಿಂದ ಕರೆಸಿ ಪೇ |
ಳಿದನಿಂದ್ರನಾ ಸತಿಗೆ || ೨ ||

ವನಿತೆ ಕೇಳ್ ಗಾಧಿನಂ | ದನನ ತಪದೆಲಮ್ಮ |
ತನು ಕರಗುವುದೀಗಲು ||
ಕನಕಾಂಗಿ ನೀನೈದಿ | ಮುನಿಯ ಮೋಹಿಸಬೇಕೆಂ |
ದೆನಲವಳಿಂತೆಂದಳು || ೩ || || 144 ||

**ಕಾಂಭೋದಿ - ಆದಿ**
ಸುಚರಿತ ಸಕಲ ಸುಗುಣಸಾಂದ್ರ | ಎನ್ನ |
ವಚನವನಾಲಿಸು ದಿವಿಜೇಂದ್ರ || ಪ ||
ಪುರುಷರ ಹೃದಯವನರೆಗಣ್ಣ ನೋಟದಿ |
ಕರಗಿಸುವನುವಿದೆ ಸರಿಯೆನಗೆ ||
ಪರಿಕಿಸೆ ನೀನೆನಗರುಹಿದ ಕಾರಿಯ |
ಹರಿಯದೆನ್ನಿಂದಲಿ ಸುರವರನೆ | ಮಹಾ || ಸುಚರಿತ || ೧ ||

ನಿಂದು ತಪದೊಳಖಿಳೇಂದ್ರಿಯವನು ಬಿಗಿ |
ದಂದದೊಳೆಸೆವ ಮುನೀಂದ್ರರಿಗೆ ||
ಮಂದಗಮನೆಯರ ಗಂಧವು ಸೊಗಸಹು |
ದೆಂದರಿದೆಯ ತಿಳುಹಿಂದೆನಗೆ | ಮಹಾ || ಸುಚರಿತ || ೨ ||

ಮುನಿಗಳೊಳೀತನು ಘನಬಲವಂತನು |
ವನರುಹಭವಗೆಣೆಯೆನಬಹುದು ||
ಅನಿಮಿಷರೊಡೆಯನೆ ನಿನಗರಿವಿಲ್ಲವೆ |
ಮನದಲಿ ಯೋಚಿಸು ಮುನಿಯದಿರು | ಮಹಾ || ಸುಚರಿತ || ೩ || || 147 ||

**ಕಾಪಿ - ಅಷ್ಟ**
ಎನಲೆಂದನಾ ಶತಯಾಗ | ಚೆಲ್ವ |
ವನಿತೆ ಮೇನಕೆಯೆ ಕೇಳೀಗ ||
ಎನಿತು ನೀ ಪೇಳ್ದರು | ಮನ ಮೆಚ್ಚದೀ ಪುರ |
ದನಿಮಿಷರುಳಿಯರು | ಘನ ವೇಗದಲಿ ಪೋಗು || ೧ ||

ಮಾರ ಮಾರುತರೊಡನಾನು | ಬಹೆ |
ನೀ ರೀತಿಯರುಹದೆ ನೀನು ||
ಆ ಋಷೀಂದ್ರಗೆ ಪೇಳು | ಬೇರೆ ಕಾರಣವನ್ನು |
ಕಾರಿಯವಹುದೆನೆ | ನಾರಿಯೊಪ್ಪಿದಳಲ್ಲಿ || ೨ || || 149 ||

**ಭಾಮಿನಿ**
ರಾಜ ಕೇಳ್ಳೈ ಬಳಿಕ ಮುನಿಕುಲ |
ರಾಜನುಗ್ರತಪಃಪ್ರಭಾವವ |
ರಾಜನಂಗಜಮಾರುತರ ಕರೆದುಸಿರಿ ಕೌಶಿಕನ ||
ತೇಜವಳಿದೀ ಮೇನಕೆಯ ತನು |
ತೇಜಕವನೊಲಿವಂತೆ ನಿಮ್ಮರಿಯ |
ತೇಜವನು ನೀವ್ ಮರೆಯಬೇಕೆನೆ ಕಾಮನಿಂತೆಂದ || ೧ || || 150 ||

**ಭೈರವಿ - ಏಕ**
ಯಾಕಿದಕಂಜಿಕೆ ನಿನಗೆ | ಮೂ |
ಲೋಕವು ಹೆದರುವುದೆನಗೆ ||
ಆ ಕೌಶಿಕನಿದಿರೇನು | ಪೇಳ್ |
ನಾಕಾಧೀಶ್ವರ ನೀನು || ೧ ||

ಎಸುವೆನು ಕುಸುಮಾಸ್ತ್ರವನು | ಸೋ |
ಲಿಸುವೆನು ಋಷಿಚಿತ್ತವನು ||
ಶಶಿಮುಖಿಯಸಮಾಕೃತಿಗೆ | ಮೋ |
ಹಿಸುವಂತೆಸಗುವೆನವಗೆ || ೨ ||

ಹೆದರದಿರೆಲೆ ವಿಧುವದನೆ | ನಾ |
ವೊದಗಿ ಬಹೆವು ನಿನ್ನೊಡನೆ ||
ಮುದದಲಿ ನಡೆ ನೀನೆಂದು | ಪೇ |
ಳಿದನಾ ಮೇನಕೆಗಂದು || ೩ ||

ಸ್ಮರನಿಂತೆನಲವಳಡಿಯ | ಮುಂ |
ದಿರಸಿದಳಾ ಸುರರೊಡೆಯ ||
ಮರುತಮನೋಜರು ಸಹಿತ | ತಾಂ |
ಪೊರಟನು ಬೆಂಬಲಕೆನುತ || ೪ || || 154 ||

**ಬೇಗಡೆ - ತ್ರಿವುಡೆ**
ಇಳಿದು ಮೇನಕೆ ಬಂದ | ಳೆಳೆಗೆ ಸೊಂಪಿನಲಿ |
ಕಲಶಕುಚಂಗಳ | ಬಲುಹಿನಿಂಪಿನಲಿ |
ಲಲಿತಾವಯವದ ನಿ | ರ್ಮಲದ ಕಂಪಿನಲಿ |
ಬಲವೈರಿ ಮುಖರ ಬೆಂ | ಬಲದ ಪೆಂಪಿನಲಿ ||
ಲಲನೆಯಂಗದ | ಲಲಗುತಿಹ ಮಂ |
ಜುಳ ವಿಭೂಷಣ | ಗಳವಿಕಾಶದ |
ಲೊಲೆವುತಂಗಜ | ನಲಗೊ ಮೇನಕೆ |
ಯೊಲಪೊ ಭಾವಿಸಿ | ತಿಳಿಯಲರಿದೆನೆ |
ಮುನಿಪನಿರ್ದಾ ವನವ ಸೇರಿದಳು | ತತ್ತಾಪಸನ ಲೋ |
ಚನದ ಬಳಿಗಾ ವನಿತೆ ಸಾರಿದಳು || ೧ || || 155 ||

**ಘಂಟಾರವ - ಅಷ್ಟ**
ಇಕ್ಷುಚಾಪವ | ನಿಕ್ಷುಚಾಪನು ಪಿಡಿ |
ದೀಕ್ಷಿಸುತಲಾ | ದಕ್ಷಮುನಿಯ ಪ |
ರೋಕ್ಷದಲಿ ನಿಲುತೆಂದನು || ೧ ||

ಘಡ ಮುನೀಂದ್ರನೆ | ಬಿಡುವೆನೆ ನಿನ್ನನೀ |
ಜಡಜವದನೆಯ | ಪೊಡೆಯೊಳೀಗಲೆ |
ಕೆಡಹಿ ಮೆರೆವೆನು ಸತ್ತ್ವವ || ೨ ||

ಕುಸುಮಬಾಣದಿ | ವಶಗೆಡಿಸುವೆ ನಿನ್ನ |
ಋಷಿತನವ ಪರಿ | ಕಿಸುವೆನೆನುತವ |
ನೆಸುತಲಿರ್ದನು ಶರಗಳ || ೩ ||

ಮಂದಮಾರುತ | ಬಂದು ಬೀಸಿದನದ |
ರಿಂದ ಜಾರಿದು | ದಂದವಳ ಕುಚ |
ದಿಂದ ಮೇಲುದ ನಡುವಿಗೆ || ೪ ||

ಕಂಡನಾಕೆಯ | ದುಂಡು ಮೊಲೆಗಳನ್ನು |
ಚಂಡ ಮುನಿ ಭ್ರಮೆ | ಗೊಂಡು ನುಡಿದನು |
ಭಂಡರಂದದೊಳವಳಿಗೆ || ೫ ||

ಭಲರೆ ಭಾಪುರೆ | ಲಲನೆ ನೀನಾರಿಲ್ಲಿ |
ನಿಲುವ ಕಾರಣ | ಗಳನು ಪೇಳೆನ |
ಗಳುಕದೆನಲವಳೆಂದಳು || ೬ || || 161 ||

**ಬೇಗಡೆ - ಏಕ**
ಲಾಲಿಸೈ ಮುನಿಪಾಲ ವೀರನೆ |
ಜನಜಾಲನುತನೆ || ಲಾಲಿಸೈ || ಪ ||
ಲಾಲಿಸೈ ಮುನಿಪಾಲಯೆನ್ನಯ |
ಮೂಲವನು ಕರುಣಾಳುತನದಲಿ || ಅ. ಪ. ||
ಇಂದ್ರಪುರ ಮಮ ಮಂದಿರವು ಸುಖ |
ದಿಂದಲಲ್ಲಿಹೆನೈ | ಜನ |
ಬೃಂದಮೆನಗೊಲ | ವಿಂದ ಮೇನಕೆ |
ಯೆಂದು ಕರೆವುತ | ಬಂದುದನುದಿನ || ಲಾಲಿಸೈ || ೧ ||

ನಾಕಗಣಿಕಾನೀಕದೊಳಗೊ |
ಬ್ಬಾಕೆಯಾಗಿಹೆನೈ | ಭೂ |
ಲೋಕ ತೀರ್ಥವಿ | ಲೋಕನಾರ್ಥದೊ |
ಳೀ ಕಡೆಗೆ ಮನ | ನೂಕಿತೆನ್ನನು || ಲಾಲಿಸೈ || ೨ ||

ಈ ರಸೆಯೊಳಿಹ ಚಾರುಪುಷ್ಕರ |
ವಾರಿಯಲಿ ಮಿಂದು || ಈ |
ದಾರಿಯಲಿ | ಸಂ | ಚಾರಗೈವುತ |
ಸೇರುತಿಹೆನು ಬ | ಲಾರಿಪುರಿಯನು || ಲಾಲಿಸೈ || ೩ || || 164 ||

**ಭಾಮಿನಿ**
ತರುಣಿಯಿಂತೆನೆ ಕೇಳುತಾ ಸುಂ |
ದರಿಗೆ ತಾಪಸ ನುಡಿದ ಚಾರೆಲೆ |
ಶರಜಮುಖಿಯೆನ್ನುರಕೆ ತಾಗಿತು ಬಾಣ ಮನುಮಥನ ||
ನೆರೆಯದುಳಿಯೆನು ನಿನ್ನನೆನಲವ |
ನಿರವು ಸತ್ಯವೊ ಸಟೆಯೊಯೆಂಬುದ |
ನರಿದಪೆನು ತಾನೆಂದು ತನ್ನೊನಿಗೆಂದಳಾ ಗಣಿಕೆ || ೧ || || 165 ||

**ಸುರುಟಿ - ರೂಪಕ**
ಯಾಕೆ ಪೇಳ್ವೆಯಿಂತು ಬರಿದೆ | ಸಾಕು ಮುನಿಪನೆ ||
ಪೋಕರಂತೆ ನುಡಿದ ನರ ವಿ | ವೇಕಿಯೆನಿಪನೆ || ಪ ||
ವರ ತಪಸ್ವಿಗಂಗಜಾಸ್ತ್ರ | ದುರುಬೆಯಿರುವುದೆ ||
ಉರುಬೆಯಿದ್ದಡವನಭೀಷ್ಟ | ದೊರಕಲರಿವುದೆ ||
ಸುರರ ತರುಣಿಯರಿಗೆ ನರರೊ | ಳೆರಕಮಪ್ಪುದೆ ||
ಎರಕಮಾದಡದರೊಳೆನಗೆ | ಗರುವಮಿಪ್ಪುದೆ || ಯಾಕೆ || ೧ ||

ಮುಪ್ಪು ಮರಣಮುಳ್ಳ ತನುವ | ನಪ್ಪಿ ನಲಿವೆನೆ ||
ಅಲ್ಪಕಾಲಸುಖಕೆ ಮಾರ್ಗ | ತಪ್ಪಿ ನಡೆವೆನೆ ||
ತಪ್ಪಿ ನಡೆದಡಮರಪುರದೊ | ಳಿಪ್ಪ ವೀರರು ||
ಅಪ್ರಶಸ್ತಮಾದ ಕೃತ್ಯ | ಕೊಪ್ಪಲಾರರು || ಯಾಕೆ || ೨ || || 167 ||

**ಆನಂದಭೈರವಿ - ಏಕ**
ಎನಲವನುಸಿರಿದ | ವನಿತೆಯೆ ನಾಂ ಬಡ |
ಮುನಿಯೆನುತರಿದೆಯಲಾ ||
ಇನಕುಲಭವನೆ | ನ್ನನುಕೂಲದೊಳಾ |
ಘನಪದವಿಯ ಪಡೆ | ದನುವನು ನೆನಸಿಕೊ || ೧ ||

ಹರುಷದೊಳೆನ್ನನು | ನೆರೆಯದಿರಲು ನಿನ |
ಗಿರಗೊಡೆನೆನಲವಳು ||
ಸ್ಮರಶರಹತಿಯಿವ | ಗಿರುವುದೆ ನಿಜವೆನು |
ತರಿದೊಪ್ಪಿದಳಾ | ವರಮುನಿವಚನಕೆ || ೨ ||

ಬಳಿಕಡಿಗೆರಗಲು | ಲಲನೆಯನಪ್ಪಿದ |
ನೊಲಿದಾ ಕೌಶಿಕನು ||
ತಿಳಿದದರಂದವ | ನೊಲವಿನೊಳಾ ನಿಜ |
ನಿಲಯಕೆ ನಡೆದರು | ಬಲರಿಪುಮುಖ್ಯರು || ೩ || || 170 ||

**ವಾರ್ಧಕ**
ಜನನಾಥ ಕೇಳ್ ಗಾಧಿಜಾತನಾ ಜಲಜಗಂ |
ಧಿನಿಯನತ್ಯಾನಂದದಿಂ ಕೂಡಿ ರಮಿಸುತಾ |
ವನದೊಳಿಪ್ಪತ್ತೈದು ವರ್ಷಮಿರೆ ಪುಟ್ಟಿದುದು ಪೆಣ್ಣೊಂದವಳ್ಗೆ ಬಳಿಕ ||
ಮುನಿ ನಿಜತಪೋದ್ರುಮಂ ಮುರಿದುದೀಯಪ್ಸರಾಂ |
ಗನೆಯಲಿನ್ನಿವಳ ರತಿ ಘನತೆಯಲ್ಲೆನುತಲಾ |
ವನಿತೆಯಂ ಬಿಟ್ಟಾತ್ಮವಲ್ಲಭೆಯನೊಡಗೊಂಡು ನಡೆದನುತ್ತರ ದಿಕ್ಕಿಗೆ || ೧ ||

ನರವೀರ್ಯಜಾತಮಿದು ತನಗೇತಕೆಂದಲ್ಲಿ |
ತೊರೆದು ತನ್ಮಣುಗೆಯಂ ಮೇನಕೆ ನಿಜಾಲಯಕೆ |
ಸರಿದಳಂದಿತ್ತ ಧರ್ಮಾರಣ್ಯಮೆನಿಪ ವನದೊಳಗಿರ್ಪ ಕಣ್ವನೆಂಬ ||
ಪರಮರ್ಷಿ ಪುಷ್ಕರಜಲಸ್ನಾನಮಂ ಮಾಡಿ |
ಬರುತ ಕಂಡಾ ಬಾಲೆಯಂ ನಿಜಾಶ್ರಮಕೊಯ್ದು |
ಪರಿಪಾಲಿಸುತ್ತಿರ್ದನುರೆ ಶಕುಂತಲೆಯೆಂಬ ಪೆಸರನಿಟ್ಟಾ ಕುವರಿಗೆ || ೨ || || 172 ||

**ಸಾಂಗತ್ಯ - ರೂಪಕ**
ಅತ್ತ ಕೌಶಿಕಮುನಿಯುತ್ತರದೆಸೆಯಲ್ಲಿ |
ಸುಸ್ಥಳದಲಿ ನಿಂದು ತಪದಿ ||
ಉತ್ತರಿಸಿದನಲ್ಲಿ ಮತ್ತೆ ಸಹಸ್ರ ಸಂ |
ವತ್ಸರಗಳನೇಕೋ ದೃಢದಿ || ೧ ||

ಪರಮೇಷ್ಠಿಯೊಲಿದವಗರುಹಿ ಮಹರ್ಷಿಯೆಂ |
ದಿರದೆ ಪೋಗಲು ಮುನಿಯಿತ್ತ ||
ವರಬ್ರಹ್ಮಋಷಿಯಾದ ಹೊರತು ತಾ ಬಿಡೆನೆಂದು |
ಮರಳಿ ತಪದಲಿರ್ದನಾತ || ೨ ||

ಬಳಿಕಲ್ಲಿ ನಿರ್ಜರಾವಳಿಯುಪದ್ರುವಮಾಗೆ |
ತಿಳಿದಲ್ಲಿ ನಿಲದೆ ಕೌಶಿಕನು ||
ಸಲೆಪೂರ್ವದೆಸೆಗೈದಿ ನಳಿನಜಾತನ ಪಾದ |
ನಳಿನಂಗಳನು ಭಜಿಸಿದನು || ೩ ||

ನಿರಶನವ್ರತವಿಡಿದರಿವರ್ಗವನು ಗೆಲ್ದು |
ಹೊರಸೂಸಗೊಡದನಿಲನನು ||
ತೊರೆದನ್ಯವಿಷಯವ ಪರಮೇಷ್ಠಿಯಲಿ ಚಿತ್ತ |
ವಿರಿಸಿ ಧ್ಯಾನಿಸುತಿರ್ದನವನು || ೪ ||

ಹೀಗೆ ಸಾವಿರ ವರ್ಷಮಾಗಲಲ್ಲಿಗೆ ಶತ |
ಯಾಗಾದ್ಯರೊಡನಜ ಬಂದು ||
ಆ ಗಾಧಿಸುತನ ತಾನಾಗಿ ಕರೆಯಲವ |
ನಾಗ ಕಾಣುತ ನುತಿಸಿದನು || ೫ || || 177 ||

**ಭಾಮಿನಿ**
ಹರಿಹರಾರ್ಚಿತಚರಣ ಜಯ ಜಯ |
ಹರಿಶತೋಪಮಕಿರಣ ಜಯ ಜಯ |
ಹರಿಶಯನಸಂಜಾತ ಜಯ ಜಯ ಹರಿವರೂಥ ಜಯ ||
ಹರಿ ಜಠರ ವಾಗೀಶ ಜಯ ಜಯ |
ಹರಿಜಭವ ಲೋಕೇಶ ಜಯ ಜಯ |
ಹರಿರುಹಾಸನಯೆನುತ ಹರಿ ಹರಿಗೆರಗೆ ಹರಿ ನುಡಿದ || ೧ || || 178 ||

**ಮಧುಮಾಧವಿ - ಏಕ**
ಎಲೆ ಗಾಧಿಸುತ ನಿನ್ನ | ಛಲಕೆ ಮೆಚ್ಚಿದೆನಯ್ಯ |
ಬಳಲಿದ್ಯೆ ಬಹುಗಾಲ | ವೊಲಿದೆನಿಂದಿನಲಿ ||
ತಿಳಿದೆ ನಿನ್ನಿಷ್ಟವ | ಸಲಿಸುವೆ ನಿನಗೆಂದು |
ನಳಿನಜನುಸಿರಲಾ | ಗಲೆ ಮುನಿ ನುಡಿದ || ೧ ||

ತಂದೆ ಕೇಳ್ ಬ್ರಹ್ಮರ್ಷಿ | ಯೆಂದೆನ್ನನಖಿಲರು |
ವಂದಿಸುವಂತೆ ನೀ | ನಿಂದನುಗ್ರಹಿಸು ||
ಹಿಂದೆ ನೀ ವರವನಿ | ತ್ತಂದವನೆಸಗಿದ |
ರೆಂದಿಗೂ ಬಿಡನೆನ | ಲೆಂದ ವಿರಿಂಚಿ || ೨ ||

ಮುನಿರಾಯ ಕೇಳು ನಿ | ನ್ನನುವಿಗೊಪ್ಪುವುದನ್ನು |
ನಿನಗಿತ್ತು ಪೋದೆನೀ | ದಿನಪರಿಯಂತ ||
ನಿನಗಿನ್ನು ಬ್ರಹ್ಮರ್ಷಿ | ಯೆನಲಿ ಲೋಕದೊಳೆನ್ನ |
ತನಯಗೆ ಸದೃಶನಾ | ಗೆನುತ ಮತ್ತೆಂದ || ೩ || || 181 ||

**ವಾರ್ಧಕ**
ಚಿತ್ತದೊಳ್ ಶಂಕಿಸದಿರೆನ್ನ ವರದಿಂದ ನೀ |
ನುತ್ತಮ ಬ್ರಹ್ಮರ್ಷಿಯಾದೆ ನಡೆಯೆನುತ ಕುಶಿ |
ಕಾತ್ಮಜಂಗುಸುರಿ ವಿಧಿ ನಿಜಪುರಕೆ ಪೋಗಲಾ ಯೋಗಿ ನಿಜಪತ್ನಿಸಹಿತ ||
ತತ್ತೇಜದಿಂ ಬಂದಯೋಧ್ಯಾ ಸಮೀಪದೊಳ್ |
ಸುಸ್ಥಾನಮಾದ ಸಿದ್ಧಾಶ್ರಮದೊಳಿರುತಿರ್ದ |
ನೆತ್ತಣದು ಯತ್ನಭಂಗಂ ಮಹಾಲಿಂಗನಡಿಯೊಲುಮೆಯಿಹ ಮಾನವರ್ಗೆ || ೧ || || 182 ||

**(ಮೊದಲನೆಯ ಸಂಧಿ ವಿಶ್ವಾಮಿತ್ರ ಪ್ರತಾಪ ಮುಗಿದುದು )**

**ಎರಡನೆಯ ಸಂಧಿ : ದುಷ್ಯಂತ ಚರಿತ್ರೆ**
**(ಶಕುಂತಲಾ ಪರಿಣಯ )**

**ವಾರ್ಧಕ**
ಧರಣೀಂದ್ರ ಲಾಲಿಸಾ ಕೌಶಿಕಾತ್ಮಜೆ ಕಣ್ವ |
ವರಮುನಿಯ ವಸತಿಯಂ ಸೇರಿರ್ದಳೆಂದಾಗ |
ಳರುಹಿದೆನಲಾ ಬಳಿಕ ದಿನದಿನದೊಳಾಕೆ ವರ್ಧಿಸುತ ನವಯೌವನವನು ||
ಧರಿಸಿರ್ದಳಾವಾಗಳಲ್ಲಿಗೆ ಸಮೀಪಮಾ |
ಗಿರುವ ಕೌಬೇರದೇಶದೊಳತಿ ಖ್ಯಾತಿಯಿಂ |
ಧರೆಯನೇಕಚ್ಛತ್ರದಿಂದ ದುಷ್ಯಂತನೆಂಬರಸನಾಳುತ್ತಿರ್ದನು || ೧ || || 183 ||

**ಭಾಮಿನಿ**
ಅವನ ಸಹಜರು ಶೂರ ಭೀಮು |
ಪ್ರವಸು ವಸುಗಳೆನಿಪ್ಪ ನಾಲುವ |
ರವನ ಗುರುವರ ಸೋಮನಾಥನು ಸಖ ವಸಂತಕನು ||
ಅವನು ನಿನ್ನೀ ಚಂದ್ರವಂಶೋ |
ದ್ಭವನು ವೈಷ್ಣವನೊಂದು ದಿವಸದೊ |
ಳವನ ಸಭೆಗೈತಂದು ವನಚರರೆಂದರಭಿನಮಿಸಿ || ೧ || || 184 ||

**ವೃಂದಾವನ - ಏಕ**
ಸಾಮಿ ಸಲಾಮು ಜೀಯಾ | ದುಷ್ಯಂತರಾಯ |
ಸಾಮಿ ಸಲಾಮು ಜೀಯಾ || ಪ ||
ದುಷ್ಟ ಮಿಗಂಗಳೆಲ್ಲಾ | ಪೊಟ್ಟಾಗಿ ವನವನೆಲ್ಲಾ |
ನಷ್ಟಗೈದವು ಸುಳ್ಳಲ್ಲ | ಕೇಳೆಮ್ಮ ಸೊಲ್ಲ || ಸಾಮಿ || ೧ ||

ಕರಿಸಿಂಗ ಪುಲಿ ಪಂದಿಗಳು | ಖರ ಖಡ್ಗ ಕಾಡ್ಗೋಣಗಳು |
ಶರಭ ಮುಂತಾದ ಮಿಗಗಳು | ಪೆಚ್ಚಿಹವು ಕೇಳು || ಸಾಮಿ || ೨ ||

ಮರಗಿಡಬಳ್ಳಿಗಳನು | ಮುರಿದು ಕಾಯ್ಪಣ್ಗಳನ್ನು |
ತರತರದಿಂದ ತಿಂದುದು | ಮಿಗವಿಂಡು ನಲಿದು || ಸಾಮಿ || ೩ || || 187 ||

**ಸೌರಾಷ್ಟ್ರ - ತ್ರಿವುಡೆ**
ಎಂದ ವನಪಾಲಕರ ನುಡಿಗಿಂ |
ತೆಂದನಾ ದುಷ್ಯಂತ ನಿಮಗಾ |
ನಂದವನು ಕಾಣಿಸುವೆ ನಾನೈ | ತಂದು ವನಕೆ || ೧ ||

ಈಗಲೇ ಕೈರಾತಬಲಯುತ |
ನಾಗಿ ಬಂದುದ್ಯಾನದಲಿ ಬಹು |
ಬೇಗ ಸದೆವೆನು ಸಕಲ ಮೃಗವ ಸ | ರಾಗದಿಂದ || ೨ ||

ಕೊರತೆ ಬೇಡಿನ್ನಿದಕೆ ನಿಮಗೆನು |
ತರಸನನುಚರರಿಂದ ಶಬರರ |
ಕರೆಸಲಾ ಕೈರಾತರರುಹಿದ | ರೆರಗಿ ನೃಪಗೆ || ೩ || || 190 ||

**ಕಾಂಭೋದಿ - ಏಕ**
ಪರಾಕೆ ದೊರೆಯೆ ಬಂದೆವು ನಾವು |
ಬರಾಕೆ ನಿನ್ನೆಡೆಗೀಗ ||
ತರಾಕೆನಿಂದೆವು ನೇಮಿಸೆಮಗೆ |
ನಿರಾಕರಿಸೆವೈ ಬೇಗ || ೧ ||

ತಿನದೆ ಮಿಗದ ಮಾಂಸವನ್ನು |
ದಿನವು ಬಹಳ ಸಂತು ||
ಬನದಿ ಬೇಟೆಯಾಡಬೇಕೆಂ |
ದೆನುವ ಮನವು ಬಂತು || ೨ ||

ಸಳ್ಳು ಬಿಲ್ಲು ಖಡುಗ ಮೊದಲಾ |
ದೆಲ್ಲ ಕೈದುವಿಡಿದು ||
ನಿಲ್ಲದೋಟು ಜನರು ಬಂದೆ |
ವಿಲ್ಲಿಗಾಗಿ ನಲಿದು || ೩ || || 193 ||

**ಭಾಮಿನಿ**
ಎಂದು ವಂದಿಸಲರಸನದಕಿಂ |
ತೆಂದನಿಂದುಪವನದ ಬೆಳೆಯನು |
ಬಂದು ತಿಂದು ಮೃಗೌಘ ಕೆಡಿಸುವುದೆನುತ ವನಚರರು ||
ಕಂದಿ ನೊಂದುಸಿರಿದರು ತದ್ವನ |
ಕಂದದಿಂದಾವ್ ತೆರಳಬೇಕೆನ |
ಲೆಂದರಂದಾ ಶೂರಭೀಮರು ಭೂಪಗಭಿನಮಿಸಿ || ೧ || || 194 ||

**ಮಾರವಿ - ಏಕ**
ಎಲೆ ಪೂರ್ವಜ ಕೇ | ಳಳುಕದೆ ಮೃಗಗಳ |
ಕೊಲುವೆವು ನಾವೈದಿ ||
ಬಲದೊಡನೆಮ್ಮನು | ಕಳುಹಿಸು ವಿಪಿನ |
ಸ್ಥಳಕತಿ ಸಂತಸದಿ || ೧ ||

ಆವ ಮಹಾಜಿ ಇ | ದಾವ ದುರಂತವು |
ದೇವ ಸದೃಶ ನೀನು ||
ಆ ವನಕೈದಿದ | ಡಾವೊಡಬಡೆಮೆಮ |
ಗೀವುದನುಜ್ಞೆಯನು || ೨ ||

ಎಂದೆನಲುಪವನ | ದಂದವ ನೋಡದೆ |
ಸಂದುದು ಬಹುಗಾಲ ||
ಇಂದೆಲ್ಲರು ಜವ | ದಿಂದಲಿ ತೆರಳುವ |
ಎಂದನು ಜನಪಾಲ || ೩ ||

ಬಳಿಕ ನೃಪತಿ ಬಹು | ಬಲವನು ಸಹಚರ |
ನುಲಿವ ಕಿರಾತರನು ||
ಚಳಕದೊಳೊಡಗೊಂ | ಡಳುಕದೆ ವಿಪಿನಕೆ |
ಘಳಿಲನೆ ಗಮಿಸಿದನು || ೪ || || 198 ||

**ಮುಖಾರಿ - ಏಕ**
ಬೇಟೆಯಾಡಿದನೈದಿ ವನದಿ | ದುಷ್ಯಂತ ಮುದದಿ |
ಬೇಟೆಯಾಡಿದನೈದಿ ವನದಿ || ಪ ||
ಕೋಟಿ ಮೃಗದ ಕೂ | ಗಾಟವ ಕೇಳುತ |
ಕೋಟಲೆಗೊಡುತ ಮ | ಹಾಟವಿಯೊಳಗೆ || ಅ. ಪ. ||
ದೆಸೆದೆಸೆಗೆಸುತಲಿ | ನುಸುಳಿ ನುಸುಳಿ ಪರಿ |
ಕಿಸಿ ಮೃಗವಿಸರಗ | ಳಸುವಡಗಿಸುತ || ಬೇಟೆ || ೧ ||

ತಟ್ಟನೆ ತೊಟ್ಟೆಸು | ತಟ್ಟುತ ಕುಟ್ಟುತ |
ಲಿಷ್ಟ ವಿಶಿಷ್ಟ ಬ | ಲಿಷ್ಟರ ಸಹಿತ || ಬೇಟೆ || ೨ || || 200 ||

**ವಾರ್ಧಕ**
ಅತ್ತಲಡಗಿತ್ತಲೆಸು ಕತ್ತರಿಸಿ ಕುತ್ತಿಗೆಯ |
ನೆತ್ತಿಹೊಯ್ಯುತ್ತೈದು ಮುತ್ತಿ ಮುಂದೊತ್ತಿ ನಡೆ |
ತತ್ತಲದೊಳೆತ್ತೆಮಗೆ ಗೊತ್ತಿಹುದೆನುತ್ತ ಖತಿವೆತ್ತು ಮುಸುಕುತ್ತ ಬರುವ ||
ಉತ್ತುಂಗ ಸತ್ತ್ವದ ಭಟೋತ್ತಮರ ಕೃತ್ಯಕಂ |
ಜುತ್ತೊಂದು ತತ್ತಲಂವೆತ್ತ ಮೃಗ ಮಸ್ತಕವ |
ನೆತ್ತಿ ಹಾರುತ್ತಿರುಗಿ ನಿತ್ತು ನೋಡುತ್ತ ಬೆಂಬತ್ತಿದಂ ಧಾತ್ರೀಶನು || ೧ || || 201 ||

**ತೋಡಿ - ಅಷ್ಟ**
ಮೃಗದ ಬೆಂಬಳಿವಿಡಿದು | ಹೋದರಸನಂ |
ಬಿಗೆ ಸಿಲುಕದೆ ಚಿಗಿದು ||
ಮಿಗೆ ಕಣ್ವಾಶ್ರಮದ ತಾ | ವಿಗೆ ಪೋಗಲದರ ಬೆ |
ನ್ನಿಗೆ ಹಾಯ್ದನಾ ನೃಪ | ದಗೆಗೊಳ್ಳದಲ್ಲಿಗೆ || ೧ ||

ಸಲೆ ಸೋಮತೀರ್ಥಕೆಂದು | ಆ ಕಣ್ವರ್ಷಿ |
ತಿಲಕನೈದಿರ್ದನಂದು ||
ಲಲನೆ ಶಕುಂತಲೆ | ಗೆಳತಿಯರೊಡನೆ ತ |
ನ್ನಿಳಯದ ಹೊರಗಿರ್ದ | ಳಲಘುಸಂಕಾಶದಿ || ೨ ||

ಧರಣೀಶನವಳ ಕಂಡು | ಕಾಮನ ಬಾಣ |
ದುರುಬೆಯೊಳ್ ಭ್ರಮಣೆಗೊಂಡು ||
ತರುಣಿಯರೆಲ್ಲರ್ಗೆ | ಮರೆಯಾಗಿ ನಿಲ್ಲುತಾ |
ಸರಸಿಜಾಂಬಕಿಯನ್ನು | ಪರಿಕಿಸುತಿಂತೆಂದ || ೩ || || 204 ||

**ಯಮುನಾಕಲ್ಯಾಣಿ - ಆದಿ**
ಭಳಿರೆ ಇನ್ನೆನಿತು ಸುಂದರಿ ಈಕೆ | ಲೋಕ |
ದೊಳಗಿಲ್ಲವಿನಿತು ಚೆಲುವಿನಾಕೆ || ಭಳಿರೆ || ಪ ||
ಈ ತರುಣಿಯನು ನಿರ್ಮಿಸಲಾಗಿ | ಪದ್ಮ |
ಜಾತನು ಸಕಲ ಕಾರ್ಯವ ನೀಗಿ ||
ನೂತನವಾಗಿ ಮಾಡಿಹನಂದು | ಈ ಸು |
ನೀತೆಯವ್ವೆಯ ಬಸಿರಲಿ ನಿಂದು || ಭಳಿರೆ || ೧ ||

ನಾರೀವರ್ಣನವಲ್ಲಿಯವಳಿಂದ | ಪುಟ್ಟಿ |
ಮೂರುಲೋಕವ ಹಬ್ಬಿದುದರಿಂದ ||
ಸೇರಿಹಳಡವಿಯೊಳಿವಳಿಲ್ಲಿ | ಜಾರ |
ರೂರೊಳಿದ್ದರೆ ನಿಲಗೊಡರಲ್ಲಿ || ಭಳಿರೆ || ೨ ||

ಪುಸಿಯಲ್ಲಿದಕೆ ಮಾರ ಶರದಿಂದ | ನಾನು |
ಬಸವಳಿದುದೆ ಸಾಕ್ಷಿಯಿವಳಿಂದ ||
ಕುಸಿದೆನಿಂದಲ್ಲದೀವರೆಗಿಂತು | ವಿಭು |
ಮಿಸಲಿಲ್ಲ ಭಂಡರಂದವನಾಂತು || ಭಳಿರೆ || ೩ || || 207 ||

**ಭಾಮಿನಿ**
ಎನುತ ಮತ್ತಿಂತೆಂದನಾಲೋ |
ಚನೆಯ ಮಾಡಿ ಶಶಾಂಕ ಕುಲಜರ |
ಮನವು ಸತ್ಕೃತಿಗಲ್ಲದನುಚಿತಮಾದ ಕಾರಿಯಕೆ ||
ಘನತೆಗೆಡದಿಂದೇತಕೀ ಮಾ |
ನಿನಿಗೆ ಸೋತೆನೊ ತಿಳಿಯೆನೆನುತಾ |
ಜನಪನಲ್ಲಿರದೈದಿ ಮೈದೋರಿದನು ಸತಿಯರಿಗೆ || ೧ || || 208 ||

**ಸಾಂಗತ್ಯ - ರೂಪಕ**
ಧರಣಿಪಾಲಕನನ್ನು ತರುಣಿಯರೀಕ್ಷಿಸು |
ತಿರದೆದ್ದು ಬೆಸಗೊಂಡರಂದು ||
ಪರಮ ತೇಜಸ್ವಿಯಾಗಿರುವ ನೀನಾರಿಲ್ಲಿ |
ಬರಲೇನು ಕಾರಣವೆಂದು || ೧ ||

ಘೋರಮೃಗಂಗಳ ಸಂಹಾರಗೈದೊಂದು |
ಹಾರುವೇಣವನು ಬೆಂಬಿಡದೆ ||
ಸೇರಿದೆನಿಲ್ಲಿ ತಾ ವೀರ ದುಷ್ಯಂತನೆಂ |
ದಾ ರಾಯನುಸಿರಿದನವರ್ಗೆ || ೨ ||

ಅರಸ ದುಷ್ಯಂತನೆಂದರುಹಿದ ಮಾತ್ರದಿ |
ತರಳೆ ಶಕುಂತಲೆಯಿವನು ||
ಪರಮ ಧಾರ್ಮಿಕನೆಂಬುದರಿತಾಸನಾದ್ಯುಪ |
ಚರಣೆಯ ಗೈದಳು ತಾನು || ೩ ||

ಅವಳ ನೋಡುತ ಭೂಪನಿವಳಾವಳಿವಳ ಪೆ |
ತ್ರವರಾರೆಂದೆನುತಲಲ್ಲಿರುವ ||
ಯುವತಿಯರನು ಕೇಳಲವಗನಸೂಯೆಯೆಂ |
ಬವಳು ತಾ ನುಡಿದಳುತ್ತರವ || ೪ ||

ಮುನಿ ಕಣ್ವನಣುಗೆಯೀ ವನಿತೆ ಶಕುಂತಲೆ |
ಯೆನುವಂತ ಪೆಸರಿವಳ್ಗೆನಲು ||
ಮುನಿ ಬ್ರಹ್ಮಚಾರಿಯಾತನಿಗೆಂತು ಮಗಳಾದ |
ಳೆನೆ ನೃಪನದಕೆಂದಳಿವಳು || ೫ || || 213 ||

**ಸಾವೇರಿ - ಆದಿ**

ಕ್ಷಿತಿಪ ಲಾಲಿಪುದು ನೀನು | ಈಕೆಯ ಮೂಲ |
ಸ್ಥಿತಿಯನ್ನು ಪೇಳ್ವೆ ನಾನು || ಪ ||
ಹಿಂದೆ ಗಾಧಿಯ ಸುತನು | ತಪದೊಳಿರ |
ಲಂದು ಮೇನಕೆಯು ತಾನು ||
ಬಂದಳವಳನಾ ಮು | ನೀಂದ್ರು ಭೋಗಿಸಲದ |
ರಿಂದ ಜನಿಸಿದಳೀ | ಸುಂದರಿಯವಳಿಗೆ || ಕ್ಷಿತಿಪ || ೧ ||

ಬಳಿಕಿವಳನು ತ್ಯಜಿಸಿ | ಐದಿದರವ |
ರಳುವ ಶಿಶುವನೀಕ್ಷಿಸಿ ||
ತಿಳಿದೆಮ್ಮ ಕಣ್ವರ್ಷಿ | ತಿಲಕನು ಪಿಡಿತಂದೀ |
ಚೆಲುವೆಗೆ ಪೆಸರನಿ | ಟ್ಟೊಲಿದು ಸಾಕಿದನಯ್ಯ || ಕ್ಷಿತಿಪ || ೨ ||

ಅಂದಿನಿಂದೀಕೆ ತಾನು | ಕಣ್ವನ ಮಗ |
ಳೆಂದಾದಳಿಳೆಯೊಳಿನ್ನು ||
ಮುಂದಾವ ಪುರುಷಗೆ | ಸಂದು ಬಾಳ್ವಪಳೊ ನಾ |
ನಿಂದು ತಿಳಿಯೆನರ | ವಿಂದಪೀಠನೆ ಬಲ್ಲ || ಕ್ಷಿತಿಪ || ೩ ||

ಅತಿಥಿ ಸತ್ಕಾರವನು | ಮಾಡುವುದೆಂದು |
ಸುತೆಗೆ ನೇಮಿಸುತ ತಾನು ||
ಗತಿವಿಡಿದನು ಮುನಿ | ಪತಿ ಕಣ್ವ ಲೋಕವಿ |
ಶ್ರುತ ಸೋಮತೀರ್ಥಕೆ | ನುತ ವಹಿಲದೊಳಿಂದು || ಕ್ಷಿತಿಪ || ೪ || || 217 ||

**ವಾರ್ಧಕ**
ಅನಸೂಯೆಯಿಂತೆನ್ನಲಾ ಪಾರ್ಥಿವಂ ತನ್ನ |
ಮನಮೀ ಶಕುಂತಲೆಯಲೆರಗಿದನುವಂ ತಿಳಿಯ |
ಲೆನಗಿದು ವಿಶೇಷಮಲ್ಲರಿಯಲ್ಕೆ ದೋಷಮಲ್ಲರಸಗಪ್ಸರೆಯೊಳೀಕೆ ||
ಜನಿಸಿದವಳದರಿಂದ ವಿಹಿತಮಾದುದರಿಂದ |
ಲೆನಿತು ಸೊಬಗಿಂದಿರ್ಪಳೆನುತಲ್ಲಿ ನಿಂದಿರ್ಪ |
ಮುನಿ ಕಣ್ವನಂದಿನಿಗೆ ಮಲಯಜ ಸುಗಂಧಿನಿಗೆ ಸಂತಸದೊಳಿಂತೆಂದನು || ೧ || || 218 ||

**ಶಂಕರಾಭರಣ - ಅಷ್ಟ**
ತರುಣಿ ಕೇಳ್ ನಿನಗೆ ವರನು | ದೊರಕಲಿಲ್ಲವೆಂಬ ವ್ಯಸನ |
ವಿರುವುದೆಂದು ತಿಳಿದೆನಿದರ | ಪರಿಯನೆಂದನು ||
ತರಳೆಯದಕೆ ಲಜ್ಜೆಯಿಂದ | ಲರಸ ನಿನ್ನ ತಿಳಿವನೆನ್ನ |
ಹಿರಿಯತನಕೆ ಧಿಕ್ಕರಿಪುದು | ಸರಿಯೆಯೆಂದಳು || ೧ ||

ಮಂದಯಾನೆ ಹಾಗಾದರಿ | ನ್ನೊಂದು ಮಾತ ಪೇಳ್ವೆನೀಗ |
ಕುಂದದೆನ್ನ ರಮಣಿ ನೀನಾ | ಗೆಂದನರಸನು ||
ತಂದೆ ಕಣ್ವನಲ್ಪದಿನದೊಳ್ | ಬಂದಪನಾವಾಗಳಾತ |
ನಿಂದ ನಿನಗೆ ಮದುವೆಯಾಹೆ | ನೆಂದು ಪೇಳ್ದಳು || ೨ ||

ಕಂತು ಶರವ ಸಹಿಸಲಾರೆ | ಕಾಂತೆ ಗಾಂಧರ್ವವಿವಾಹ |
ದಂತೆ ಮಾಡಲೇನು ನಿನಗೆ | ಚಿಂತೆಯೆಂದನು ||
ಎಂತು ಮಾಳ್ಪೆ ನಾನು ನಿಸ್ವ | ತಂತ್ರೆಯಾಗಿರ್ದೀಗಳೀ ಸ್ವ |
ತಂತ್ರ ಕೃತಿಯನೆನಗಿದೊಂದೆ | ಚಿಂತೆಯೆಂದಳು || ೩ || || 221 ||

**ಕಂದ**
ಇಂತೆನೆ ಮೋಹದೊಳಾ ದು |
ಷ್ಯಂತಂ ಹಲವಂಗದಿಂದಲೊತ್ತಾಯದೊಳಂ ||
ಕಾಂತಾಮಣಿಯಂ ಬೋಧಿಸ |
ಲಿಂತೆಂದಳ್ ಮೇನಕಾತ್ಮಸಂಭವೆ ನೃಪಗಂ || ೧ || || 222 ||

**ಕಾಂಭೋದಿ - ಆದಿ**
ಭೂಮಿಪಾಲಕ ಲಾಲಿಸು | ನಾನೆಂಬ ನುಡಿಯ |
ಪ್ರೇಮದಿಂದಲಿ ಪಾಲಿಸು || ಪ ||
ಮುಂದಣ ಗತಿಯೇನನು | ಯೋಚಿಸದೆ ನೀ |
ಬಂದು ಪೇಳಿದ ಮಾತನು ||
ಒಂದನೆ ಹಿಡಿದರೆ | ಚಂದಮೆನಿಸದದ |
ರಿಂದರುಹುವೆ ನಿ | ನ್ನೊಂದಭಿಮಂತ್ರವ || ಭೂಮಿ || ೧ ||

ಅನಘ ಪಾರ್ಥಿವ ನಿನಗೆ | ಸ್ವಬುದ್ಧಿಯಿಂದ |
ವನಿತೆಯಾದಪೆನೆನಗೆ ||
ಜನಿಸುವವನಿಗೆ ನೃಪ | ತನವನು ಕೊಟ್ಟಪೆ |
ನೆನುತಲಿ ನಂಬುಗೆ | ಯನು ನೀನಿತ್ತರೆ || ಭೂಮಿ || ೨ || || 224 ||

**ಶಾರ್ದೂಲವಿಕ್ರೀಡಿತಂ**
ಎಂದಾ ಚಂದನಗಂಧಿಯುಕ್ತಿಗೆ ಮಹಾ ಸಂತೋಷದಿಂದೊಪ್ಪುತಂ |
ನಿಂದಿಂತೆಂದನಿದೇಂ ದುರಂತಕೃತಿ ನಿನ್ನಿಷ್ಟಾರ್ಥಮಂ ಕೊಟ್ಟಪೆಂ ||
ಮುಂದಾನಂದದೊಳಂದದಿಂದಮೆನುತಾ ನಾರೀಶಿರೋರನ್ನೆಗಂ |
ಅಂದಾ ಇಂದುಕುಲಪ್ರದೀಪಕನೃಪಂ ವಾಗ್ದಾನಮಂ ಮಾಡಿದಂ || ೧ || || 225 ||

**ಭಾಮಿನಿ**
ಬಳಿಕ ಕೇಳ್ ಗಾಂಧರ್ವವಿಧಿಯಿಂ |
ದೊಲಿದು ಕೈವಿಡಿದವಳನಾ ಮುನಿ |
ನಿಳಯದೊಳಗಾ ನಿಶಿಯೊಳಾ ಸುಂದರಿಯ ಸಂಗದಲಿ ||
ಇಳೆಯಧಿಪನಿರಲಿತ್ತಲಾ ವನ |
ದೊಳಗೆ ಸಂಜೆಯೊಳರಸುತಣ್ಣನ |
ನೆಲೆಯನರಿಯದೆ ಶೂರ ಭೀಮಾದಿಗಳಿಗಿಂತೆಂದ || ೧ ||  || 226 ||

**ತುಜಾವಂತು - ಮಟ್ಟೆ**
ಸೋದರಾದಿ ಭಟರು ಕೇಳಿರೈ | ಈಗಲೊಂದು |
ಚೋದಿಗವನು ಪೇಳ್ವೆನಿದರ |
ಭೇದವನ್ನು ಪೇಳಿರಯ್ಯ || ಸೋದರಾದಿ || ಪ ||
ಜಡಜಮಿತ್ರ ಪಡುಗಡಲ್ಗೆ |
ನಡೆದನೆಮ್ಮ ಬೀಡಿಕೆಯನು |
ಪಡೆ ಸಜೀವದೊಡನೆ ಸೇರ್ದು |
ದಡವಿಯಲಿ ಮದಗ್ರಭವನು |
ನಡೆದನೆಲ್ಲಿಗಾವ ದೆಸೆಯಲಿ || ನಿಂದನೇನು |
ತೊಡಕು ಸಂಭವಿಸಿತೊ ನಿಶಿಯಲಿ || ಬಾರದೇಕೆ |
ತಡೆದನಿದರ ಬುಡದೊಳಾವ |
ಕೆಡುಕು ಬಹುದೊ ನುಡಿಯಿರೀಗ || ಸೋದರಾದಿ || ೧ ||  || 227 ||

**ಶರಷಟ್ಪದಿ**
ಎನಲೆಂದರು ಶೂ | ರನಿಗಾ ಶಬರರು |
ಜನಪತಿಯಿಂದಾವಲ್ಲಿಹನು ||
ಎನುವುದನರಿಯಲು | ಮನದೊಳಸಾಧ್ಯವು |
ನಿನಗೊಂದೊರೆವೆ ಉಪಾಯವನು || ೧ ||

ಇದೆ ವನದೊಳಗ | ಲ್ಲದೆ ಮೇಣೆಲ್ಲಿಗು |
ಪದವನಿಡನು ನೃಪನದರಿಂದ ||
ಬೆದರದೆ ಕರೆ ಕರೆ | ದೊದಗಿನೊಳರಸುವ |
ಕದಲದೆ ಕೊಳ್ಳಿಯ ಬೆಳಕಿಂದ || ೨ ||

ಎಂದೆನೆ ಭೀಮ ಪು | ರಂದರಸದೃಶ ಮ |
ಹೀಂದ್ರ ಮದಗ್ರಜನೀ ವನದಿ ||
ನಿಂದಿಹ ಜಂತುಗ | ಳಿಂದವಗೊದಗದು |
ದಂದುಗಮೆಂದುಸಿರಿದ ಜವದಿ || ೩ ||  || 230 ||

**ಸೌರಾಷ್ಟ್ರ - ತ್ರಿವುಡೆ**
ಮತ್ತೆ ಪೇಳಿದನಾತನಂಬುಜ |
ಮಿತ್ರನುದಯದೊಳಣ್ಣದೇವನ |
ನೆತ್ತಲಿರ್ದರು ಹುಡುಕಿಕೊಡುವೆನು | ಯತ್ನದಿಂದ || ೧ ||

ಈಗ ನಿಶಿಯಲಿ ಕೊಳ್ಳಿ ಬೆಳಕಿನ |
ಲಾಗದೆನೆ ಶೂರಾದ್ಯರಾ ನುಡಿ |
ಗಾಗ ಸಮ್ಮತಿಸಿರ್ದರಲ್ಲಿ ಸ | ರಾಗದಿಂದ || ೨ ||

ಬಳಿಕ ಭಾಸ್ಕರನುದಿಸೆ ಪೂರ್ವಾ |
ಚಲದೊಳಾ ದುಷ್ಯಂತನತ್ತಲು |
ತಿಳಿದು ಕಣ್ವಾಶ್ರಮದೊಳೆಂದನು | ಲಲನೆಯೊಡನೆ || ೩ || || 233 ||

**ಶಂಕರಾಭರಣ - ರೂಪಕ**

ಮಂದಗಮನೆ ಮನೆಗೆ ಪೋಪೆ | ನೊಂದೆ ಮನದಲಿ |
ಬಂದು ಬಾಳಿದಪೆಯೊ ಮೇಣು | ಹಿಂದಿನಿಂದಲಿ ||
ತಂದೆಯಾಜ್ಞೆವೆತ್ತು ಬಹೆಯೊ | ಕುಂದದೆನ್ನೊಳು |
ಇಂದು ಪೇಳೆನಲ್ಕೆ ತರುಣಿ | ಯಂದು ನುಡಿದಳು || ೧ ||

ಅರಸ ಲಾಲಿಸೆನ್ನ ಜನಕ | ಕಿರಿದು ದಿನದೊಳು |
ಬರುವನವನ ಪರಕೆವೆತ್ತು | ತೆರಳ್ವ ಮುದದೊಳು ||
ಎರೆಯ ನೀನಗಲ್ವ ಮಾತು | ಸರಿಯೆ ನೀತಿಗೆ |
ಅರಿತು ನೋಡೆನಲ್ಕೆ ನೃಪತಿ | ಯೊರೆದನಾಕೆಗೆ || ೨ ||

ತಿಳಿಯದೆನ್ನ ನಿಜವನಡವಿ | ಯೊಳಗೆ ಹುಡುಕುತ |
ಬಳಲದಿರರು ಸೋದರಾದಿ | ಭಟರು ಸರ್ವಥಾ ||
ನಿಲುವನಲ್ಲ ಪೋಪೆನಿನ್ನು | ಕೆಲವು ದಿನದೊಳು |
ಲಲನೆ ನಿನ್ನ ಕರೆಸಿಕೊಂಬೆ | ನೊಲಿದು ಮುದದೊಳು || ೩ ||

ನುಡಿಯಿದನೃತವಲ್ಲ ನಂಬು | ಕೊಡುವೆನೀಗಲೆ |
ತಡೆಯದೆನ್ನ ಮುದ್ರಿಕೆಯನು | ಪಿಡಿಯೆನುತ್ತಲೆ ||
ಒಡನೆ ರಾಜನುಂಗುರವನು | ಮಡದಿಗೀಯುತ |
ಒಡಬಡಿಸಿದನವಳ ನಯದ | ನುಡಿಯನಾಡುತ || ೪ || || 237 ||

**ವಾರ್ಧಕ**

ಇಂತು ನಿಜಕಾಂತೆಯಂ ಸಂತೈಸಿ ಪೊರಟು ತದ |
ನಂತರಂ ತಾಂ ತವಕದಿಂ ತನ್ನನರಸುತ ವ |
ನಾಂತರದೊಳಂ ತಿರುಗುವಂತ ಸಹಜಾದ್ಯಖಿಲರೆಡೆಗೈದಿ ನುಡಿಸುತವರ ||
ಚಿಂತಾಗ್ನಿಯಂ ತಣಿಸಿ ಸಂತಸದೊಳಾದ ವ್ಯ |
ತ್ಯಾಂತಂಗಳಂ ತಿಳುಪುತಂ ತೇಜದಿಂದಾ ಶ |
ಕುಂತಲಾಕಾಂತ ದುಷ್ಯಂತ ನಿಜ ಪಟ್ಟಣಕೆ ತಾಂ ತೆರಳ್ದನನುಜರೊಡನೆ || ೧ || || 238 ||

**ಭಾಮಿನಿ**

ಅರಸ ಕೇಳೈ ಕೆಲವು ದಿನಗಳು |
ತೆರಳಿದವು ನಿಜ ರಾಜಕಾರಿಯ |
ತರಣಿಯಲಿ ರಮಣೀವಿಯೋಗವ್ಯಸನತಮವಡಗೆ ||
ಬರಲಿ ಮೆಲ್ಲನೆ ಪಿತನನುಜ್ಞೆಯ |
ಧರಿಸಿ ತಾನೇ ಮಡದಿಯತ್ಯಾ |
ತುರವು ಘನವಲ್ಲೆನುತ ನಿಶ್ಚಿಂತೆಯಲಿ ನೃಪನಿರ್ದ || ೧ || || 239 ||

**ತೋಡಿ - ಅಷ್ಟ**

ಎಲೆ ಜನಪಾಲಕ | ತಿಲಕ ಕೇಳ್ ಬಳಿಕತ್ತ |
ಸಲೆ ಸೋಮತೀರ್ಥವನು ||
ಉಳಿದು ನಿಜಾಶ್ರಮ | ಕೊಲವಿಂದ ಬಂದನು |
ಚಳಕದಿಂದಾ ಕಣ್ವನು || ೧ ||

ಪೊರೆದ ತಂದೆಯ ಕಂಡು | ನೆರೆ ಶಕುಂತಲೆ ಸಹ |
ಚರಿಯರು ಸಹಿತವಗೆ ||
ಎರಗಲೆಲ್ಲರನೆತ್ತಿ | ಪರಸುತ್ತ ಮುನಿ ಪೇಳ್ದ |
ಹರುಷದಿ ನಿಜಸುತೆಗೆ || ೨ ||

ತರಳೆ ನಿನ್ನಯ ಮುಖ | ಸಿರಿ ಹೆಚ್ಚಿತೇನೆನ |
ಲುರೆ ಲಜ್ಜೆಯಿಂದಾಕೆಯು ||
ಇರಲಿವಳೆಸಗಿದ | ಪರಿಯನೆಲ್ಲವನವ |
ಗರುಹಿದಳನಸೂಯೆಯು || ೩ || || 242 ||

**ಕಂದ**
ಮುನಿಪಂ ಕೇಳುತ ತನ್ನಯ |
ಮನದೊಳಗಿರ್ದಂತೆ ಮಾಡಿದಳ್ ಮಗಳೆನುತಂ ||
ಘನಹರುಷದೊಳಾ ಸುತೆಯಂ |
ದಿನದಿನದೋಳ್ ಪೊಗಳುತಿರ್ದನತಿಶಯಸುಖದಿಂ || ೧ || || 243 ||

**ರೇಗುಪ್ತಿ - ಅಷ್ಟ**
ಧರಣೀಂದ್ರ ಲಾಲಿಸಯ್ಯ | ಮುಂಗತೆಯನು |
ಧರಣೀಂದ್ರ ಲಾಲಿಸಯ್ಯ || ಪ ||
ಧರಣೀಂದ್ರ ಲಾಲಿಸು | ವರಪುಣ್ಯಚರಿತವ |
ನರುಹುವೆ ನಿನಗೆ ವಿ |ಸ್ತರಿಸಿ ಕಾರುಣ್ಯದಿ || ಧರಣೀಂದ್ರ || ಅ. ಪ. ||
ನಾರಿ ಶಕುಂತಲೆ | ಯಾ ಋಷ್ಯಾಶ್ರಮದಲ್ಲಿ |
ಭೂರಿ ಸಂತೋಷದೊಳಿರುತಿರಲು ||
ವೀರ ದುಷ್ಯಂತನ ವೀರ್ಯದಿಂದವಳಲ್ಲಿ |
ತೋರಿತು ಗರ್ಭವು | ಚಾರುಲಕ್ಷಣದಿಂದ ||
ಲೇರಿತು ದಿನದಿನಕೆ | ತಿಂಗಳು ನಾಲ್ಕು |
ಜಾರಿದುದೆಣಿಸಲಿಕೆ || ತನ್ನಿನಯನ |
ದಾರಿಯ ನೋಡುತಾಕೆ | ಮರೆದನೇಕೇ |
ನೀರನೆನುತ ಶೋಕ | ಭಾರದಿಂದಿರ್ದಳು || ಧರಣೀಂದ್ರ ಲಾಲಿ || ೧ ||

ಒಂದು ದಿವಸವಾ ಮು | ನೀಂದ್ರನಲ್ಲಿಲ್ಲದಿ |
ರ್ದಂದು ದುರ್ವಾಸನು ಬಂದಲ್ಲಿಗೆ ||
ನಿಂದಿರಲಾ ಕಣ್ವ | ನಂದನೆಯತಿ ಶೋಕ |
ದಿಂದವಗಿದಿರೆದ್ದು | ವಂದಿಸದಿರಲದ |
ರಿಂದವನರಿತವನು || ಯಾವನ ಧ್ಯಾನ |
ದಿಂದಲಿಂತಿಹೆಯೊ ನೀನು | ಆತಗೆ ತಪ್ಪ |
ಲಂದಿನಿಂದಲಿ ನಿನ್ನನು | ಕಂಡಿಹ ಕುರು |
ಹೆಂದವಳನು ಕೋಪ | ದಿಂದ ಶಪಿಸಿದನು || ಧರಣೀಂದ್ರ || ೨ ||

ಅನಸೂಯೆ ಕಾಣುತ್ತ | ಮನದಲಿ ಹೆದರುತ |
ಮುನಿಯಡಿಗೆರಗುತ ವಿನಯದಿಂದ ||
ಇನಯ ದುಷ್ಯಂತನ ನೆನೆವುತ್ತಲಿರ್ದಳೀ |
ವನಿತೆ ಗರ್ಭಿಣಿಯೀಕೆ | ಗಿನಿತು ಶಿಕ್ಷೆಯನೀಯ |
ದನಘ ನೀ ಕ್ಷಮಿಸೆನಲು || ತನ್ನಯ ಕುರು |
ಹನು ತನ್ನ ರಮಣಿಯೊಳು | ನೋಡಿದರೆಲ್ಲ |
ನೆನಪಾಗಲಂದಿನೊಳು | ತದ್ರೂಪಗೆಂ |
ದೆನುತವಳೊಡನೆ ತ | ನ್ಮುನಿ ಹೇಳಿ ನಡೆದನು || ಧರಣೀಂದ್ರ || ೩ ||

ಮೊದಲೆ ದುಃಖಿಸುವಳೀ | ಸುದತಿ ಗರ್ಭಿಣಿಯೀಕೆ |
ಹೆದರ್ವಳೀ ಶಾಪಶಬ್ದದಲೆನುತ ||
ಅದನವಳೊಡನರು | ಹದೆ ಸುಮ್ಮನಿರ್ದಳು |
ವಿಧುಮುಖಿಯನಸೂಯೆ | ಯದರ ಮೇಲ್ವೈತಂದು |
ಮುದದಿಂದ ಮುನಿಕಣ್ವನು || ತನ್ನನುಜೆಯ |
ಹದವ ಕಂಡು ತಾನು | ಇನ್ನಿವಳನ್ನು |
ಮದುವೆಯಾದರಸನನು | ಕಾಣಿಸದಿರು |
ವುದು ಮಾರ್ಗವಲ್ಲೆನು | ತೊದಗಿಂದ ಸುತೆಗೆಂದ || ಧರಣೀಂದ್ರ || ೪ || || 247 ||

**ಸಾವೇರಿ - ಏಕ**
ತರಳೆ ಕೇಳ್ ಬರಿದೆ ನೀ | ಮರುಗದಿರೇನಹು |
ದರಸನಾತನು ಕಾರ್ಯ | ಭರದಿಂದ ನಿನ್ನ ||
ಮರೆದನಲ್ಲದೆ ಬೇರೇ | ನಿರದು ನೀನಲ್ಲಿಗೆ |
ತೆರಳುವುದುಚಿತಮಾ | ಗಿರುವುದಿಂದಿನಲಿ || ೧ ||

ಎನುತೊಡಬಡಿಸಿ ನಂ | ದನೆಯನ್ನು ಬಳಿಕಲಾ |
ಮುನಿವರ ಗೌತಮಿ | ಎನುವ ವೃದ್ಧೆಯನು ||
ಮುನಿಕುಮಾರಕರೀರ್ವ | ರನು ಕರೆದವರಿಗೆ |
ತನುಜೆಯೊಡನೆ ಪೋಪು | ದೆನುತ ನೇಮಿಸಿದ || ೨ ||

ಬಳಿಕ ಶಕುಂತಲೆ | ಸಲೆ ಶಕ್ರತೀರ್ಥವ |
ನಿಳಿದು ಮಜ್ಜನಗೈವಾ | ಗಳೆ ಬೆರಳಿಂದ ||
ಕಳಚಿ ಬಿದ್ದುದು ನೃಪ | ತಿಲಕನೂರ್ಮಿಕೆಯದ |
ತಿಳಿಯದೈತಂದಳಾ | ಜಲರುಹನೇತ್ರೆ || ೩ || 250 ||

**ಆರ್ಯಾ ಸವಾಯ್ - ಏಕ**
ತದನಂತರದೊಳಗಾ ಮುನಿ |
ಸದನದೊಳಾದದು ಸಮಸ್ತರಿಂಗಶನಂ ||
ಸುದತಿ ಶಕುಂತಲೆ ತಾಪಸ |
ವಧುಗಳನುರೆ ಬೀಳುಗೊಂಡು ಪಿತಗೆಂದಳ್ || ೧ || || 251 ||

**ಶಂಕರಾಭರಣ - ಮಟ್ಟೆ**
ಪತಿಯ ನಿಲಯಕೆ | ಪೋಗಿ ಬರುವೆನು |
ಪಿತನೆ ಪರಸುತ | ಕಳುಪು ತನ್ನನು ||
ವ್ಯಥೆಯ ತಾಳಬೇ | ಡೆನುತ ನಮಿಸಿದ |
ಸುತೆಯನೆತ್ತುತ | ಕಣ್ವನುಸಿರಿದ || ೧ ||

ಮಗಳೆ ಸುಖದಲಿ | ಬಾಳು ಕಾಂತನ |
ಬಗೆಯನರಿತು ಸೇ | ವಿಸುವುದಾತನ ||
ಸುಗುಣೆಯೆನಿಸಿಕೋ | ಎನುತ ಪರಸಿದ |
ದೃಗು ಜಲಂಗಳ | ಕರದೊಳೊರೆಸಿದ || ೨ ||

ಮೌನಿಯಾಜ್ಞೆಯ | ಪಡೆದು ಮೂವರು |
ಸಾನುರಾಗದಿ | ಮುಂದೆ ನಡೆದರು ||
ಮೇನಕಾತ್ಮಜೆ | ಯವರ ಬಳಿಯಲಿ |
ತಾನೆ ನಡೆದಳು | ಶೋಕಿಸುತ್ತಲಿ || ೩ ||

ಮೆಲ್ಲಮೆಲ್ಲನೆ | ಹೆಜ್ಜೆಯಿರಿಸುತ |
ನಲ್ಲ ಮರೆದನೇ | ಕೆನುತಲೆಣಿಸುತ ||
ಅಲ್ಲಿಗಲ್ಲಿಗೆ | ಹಿಂದೆ ನೋಡುತ |
ನಿಲ್ಲುತಾಕೆಯ್ಯ | ದಿದಳು ಮರುಗುತ || ೪ || 255 ||

**ಸಾಂಗತ್ಯ – ರೂಪಕ**

ಇಂತವರೈದಿ ದುಷ್ಯಂತನೋಲಗಕಾಗಿ |
ನಿಂತಿರಲೀಕ್ಷಿಸುತವರ ||
ಸಂತೋಷದಲಿ ಕ್ರಮದಂತೆ ಸತ್ಕರಿಸುತ |
ಲಿಂತೆಂದನಾ ನೃಪವೀರ || ೧ ||

ಆರು ನೀವೆಲ್ಲಿ ನಿಮ್ಮೂರಿಲ್ಲಿಗೈತಂದ |
ಕಾರಣವೇನೆನಲಾಗ ||
ಶಾರದ್ವತಾಂಕನೆಂಬೋರುವ ಮುನಿಸುತ |
ನಾ ರಾಯಗೆಂದನು ಬೇಗ || ೨ ||

ನೆರೆ ಕಣ್ವನಾಜ್ಞಾನುಸರಣೆಯೊಳಿಹ ಮುನಿ |
ತರಳರಾವ್ ನಿನ್ನರಸಿಯನು ||
ಹರುಷದಿ ನಿನಗಿತ್ತು ಬರುವುದೆಂದಾ ಯೋಗಿ |
ಯೊರೆಯೆ ಬಂದಿಹೆವೆಂದನವನು || ೩ ||

ಎಲ್ಲಿಹಳೆನ್ನಯ ವಲ್ಲಭೆಯೆನೆ ನೃಪ |
ಫುಲ್ಲಪದ್ಮಾಕ್ಷಿಯಲ್ಲಿಂದ ||
ಮೆಲ್ಲನೆ ಮುಂದೈದಿ ನಲ್ಲಗೆರಗಲವ |
ನಲ್ಲಿ ನಾರಿಯ ನೋಡುತಿರ್ದ || ೪ ||

ಜನನಾಥ ಕೇಳಯ್ಯ ಮುನಿಶಾಪದನುವನೇ |
ನೆನಲಿ ಕಂಡಾ ಕಾಮಿನಿಯನು ||
ಮನದಿ ತನ್ನರಸಿಯಲ್ಲೆನುತ ನಿಶ್ಚಯಿಸುತ್ತ |
ಮುನಿಕುಮಾರರಿಗೆಂದ ನೃಪನು || ೫ ||

ಯಾಕಿನಿತುಸಿರುವಿರೀಕೆಯ ವಕ್ತ್ರವಿ |
ಲೋಕನವೆನಗಿಲ್ಲೀವರೆಗೆ ||
ಕಾಕು ಮಾತುಗಳಿಷ್ಟೆ ಸಾಕು ಸುಮ್ಮನೆ ಪೋಗಿ |
ರೀಕೆ ಸಹಿತ ನಿಮ್ಮ ಮನೆಗೆ || ೬ || || 261 ||

**ಭಾಮಿನಿ**

ಎಂದ ನುಡಿಗಾಸ್ಥಾನ ವಿಸ್ಮಯ |
ದಿಂದಲಿರ್ದುದು ಸತಿ ಶಕುಂತಲೆ |
ಗಂದು ಬೆಚ್ಚಿತು ಚಿತ್ತ ಚಿತ್ರವ ಮುಸುಕಿತಾಶ್ಚರ್ಯ ||
ಕಂದಿ ನರಕೃತಮೂರ್ತಿಯಂದದಿ |
ನಿಂದಳಲ್ಲಿಯೆ ಬಿಗಿದ ಮೌನದೊ |
ಳಂದದೆಲ್ಲರ ಕಂಡು ಗೌತಮಿ ನುಡಿದಳವನಿಪಗೆ || ೧ || || 262 ||

**ತೋಡಿ - ಅಷ್ಟ**
ಏನಯ್ಯ ನೃಪ ಬಹು | ಮಾನಿ ನೀನಾಗಿರ್ದು |
ಮೇನಕಾತ್ಮಜೆಯನಿಂತು | ಅಂಜಿಸಿದರೀ |
ದೀನೆ ಜೀವಿಸುವುದೆಂತು ||
ಜ್ಞಾನಮಾರ್ಗದೊಳರಿ | ದೀ ನಿತಂಬಿನಿಯ |
ಸಾನುರಾಗದಲಿ ನೀನು | ಕೂಡಿಕೊಯೆನ |
ಲಾ ನರೇಶ್ವರನೆಂದನು || ೧ ||

ಆವನ ಸುತೆಯೋ ಮೇ | ಣಾವನ ಸತಿಯೋ ಮ |
ತ್ತಾವ ಕುಲಜೆಯೋ ಈಕೆ | ನೀವೆನ್ನಂತ |
ರ್ಭಾವವನರಿಯಲಿಕೆ ||
ಈ ವಿವರವ ಪೇಳ್ದೊಡೆ | ಡಾವು ಮನ್ನಿಸೆವೆನ |
ಲಾ ವಚನವ ಕೇಳ್ದರು | ಶೂರಾದಿಗ |
ಳಾ ವೀರಗಿಂತೆಂದರು || ೨ ||

ಹಿಂದೆ ನೀ ಕಣ್ವನ | ಮಂದಿರದೊಳಗಾ ಮು |
ನೀಂದ್ರನ ಕುವರಿಯನು | ಸಂಗ್ರಹಿಸಿದೆ |
ನೆಂದೆಮ್ಮೊಳಂದೆ ನೀನು ||
ಚಂದದಿ ನುಡಿದಿಹೆ | ಇಂದದ ಮರೆದೆಯೀ |
ಸುಂದರಿಯವಳೆಯೆಂದು | ತೋರುವುದನ |
ಲೆಂದನಾ ರಾಯನಂದು || ೩ ||

ನುಡಿಯಲ್ಲ ನಿಜವಾದ | ರೊಡಗೂಡಿಕೊಂಬರಾ |
ಜಡಜಾಕ್ಷಿಯಲ್ಲವೀಕೆ | ಆವುದಕೆನ್ನ |
ಹಿಡಿವಳೊ ತಿಳಿಯೆನೇಕೆ ||
ಬುಡವನ್ನು ತಿಳಿಯದೆ | ನ್ನೊಡನೆ ಪೇಳುವಿರೆನೆ |
ದೃಢಮತಿಯಾಂತು ನಿಂತು | ಶಕುಂತಲೆ |
ನುಡಿದಳು ಕಾಂತಗಿಂತು || ೪ || 266 ||

**ಸೌರಾಷ್ಟ್ರ - ತ್ರಿವುಡೆ**
ಅರಸ ಲಾಲಿಸು ನಿನಗೆ ಮೆಚ್ಚಿದೆ |
ಕರುಣಿ ಧಾರ್ಮಿಕ ಸಕಲ ಗುಣಗಣ |
ಭರಿತ ನೀನಹುದಹುದು ಚಿತ್ತಕೆ | ಹರುಷವಾಯ್ತು || ೧ ||

ತಂದೆ ಬರಲೆನುತಾನು ನಿನ್ನೊಡ |
ನೆಂದಡದಕೊಡಬಡದೆ ಬಹುಪರಿ |
ಯಿಂದ ಬೋಧಿಸಿ ವರಿಸಿಯೆನ್ನನು | ಕೊಂದೆಯಿಂದು || ೨ ||

ಎನಗೆ ಜನಿಸುವನಿಂಗೆ ಸಕಲಾ |
ವನಿಯನಿತ್ತಪೆನೆಂದು ಭಾಷೆಯ |
ಮನವೊಲಿದು ನೀ ಕೊಟ್ಟೆಯೆನಗಾ | ದಿನದೊಳಲ್ಲಿ || ೩ ||

ಕರೆಸಿಕೊಂಡಪೆನೆನ್ನನೆನುತಂ |
ಗುರವ ನೀನೊಲಿದಿತ್ತು ಬಂದೀ |
ಪರಿಯ ಮಾಡಿದೆಯೆನಲು ಧರಣಿಪ | ಕೆರಳಿ ನುಡಿದ || ೪ || || 270 ||

**ಕಾಂಭೋದಿ - ಝಂಪೆ**
ಬರಿದೆ ಗಳಹುವುದೇಕೆ | ತರುಣಿ ಕೇಳ್ ನಿನ್ನೊಳುಂ |
ಗುರಮೆನ್ನದಿರ್ದೊಡದನೀಗ ||
ಪರಿಕಿಸುವೆನಹುದಾದ | ಡಿರಿಸಿಕೊಂಡಪೆ ನಿನ್ನ |
ತ್ವರಿತದಲಿ ತೋರೆಂದನಾಗ || ೧ ||

ಬಳಿಕ ನೋಡಿದಳಾಕೆ | ಸಲೆ ತನ್ನ ಬೆರಳನದ |
ರೊಳು ಕಾಣದವನುಂಗುರವನು ||
ಅಳಲಿದಳದೆಲ್ಲಿಯೋ | ಕಳಚಿ ಬಿದ್ದುದೆನುತ್ತ |
ಕಳವಳಿಸೆ ಕಂಡೆಂದ ನೃಪನು || ೨ ||

ಹುಚ್ಚು ಹೆಂಗುಸೆ ಹುಸಿಯ | ನುಚ್ಚರಿಸಿ ಮನ್ನನವ |
ಮೆಚ್ಚಿಸುವೆನೆನುತ ಬಂದಿಲ್ಲಿ ||
ಕೆಚ್ಚೆದೆಯೊಳೊದರುತಿಹೆ | ಹೆಚ್ಚು ಮಾತೇಕೆ ಬಾಯ್ |
ಮುಚ್ಚಿ ನಡೆ ಬಂದ ದಾರಿಯಲಿ || ೩ ||

ನಾರಿಯರ ಕಪಟಕೃತಿ | ಯಾರಿಗರಿವಹುದೀ ವಿ |
ಚಾರವಾವೂರೊಳಾಗಿಹುದು ||
ಏರುತಿದೆ ಗರ್ಭ ನಿನ | ಗಾರು ಮೆಚ್ಚುವರು ಕೆಲ |
ಸಾರೆಂದನಾರ್ಭಟಿಸಿ ಜಡಿದು || ೪ ||  || 274 ||

**ಭಾಮಿನಿ**
ಅರಸ ಕೇಳೇನೆಂಬೆನಾ ನೃಪ |
ವರನ ಗರ್ಜನೆಗಾ ಶಕುಂತಲೆ |
ಧರೆಗೆ ಧೊಪ್ಪನೆ ಬಿದ್ದಳತಿಶಯ ಭೀತಿ ಭಾರದಲಿ ||
ಕರಗಿತಂತಃಕರಣ ಸಭೆಯೊಳ |
ಗಿರುವ ಸಕಲರಿಗವಳನೀಕ್ಷಿಸಿ |
ಕರುಣದಿಂದಾ ನೃಪನ ಗುರುವಿಂತೆಂದನಾ ಸತಿಗೆ || ೧ ||  || 275 ||

**ತೋಡಿ - ತ್ರಿವುಡೆ**
ಹೆದರಬೇಡೆಲೆ ಮಗಳೆ ನೀ ಸದು |
ಹೃದಯೆ ಪಾತಿವ್ರತೆ ವಿಚಾರಿಸ |
ಲಿದಕೆ ಸಂಶಯವಿಲ್ಲವೀ ನೃಪನು ||
ಅಧಮನಲ್ಲಿವಗೇತಕಿಂದಿನ |
ಲೊದಗಿತೋ ಈ ಬುದ್ಧಿಯರಿಯೆನು |
ತುದಿಗೆ ತಿಳಿಯದೆ ಮಾಣನೆಲ್ಲವನು || ೧ ||

ಕುಶಲದಲಿ ನೀನೆನ್ನಲಿರು ತವ |
ಬಸಿರೊಳೀ ಭೂವರನ ಪೋಲುವ |
ಪಸುಳೆ ಜನಿಸದೆ ಹೋಗದಾ ದಿನದಿ ||
ವಸುಮತೀಶನು ನಿನ್ನನೊಡಗೊಂ |
ಡೆಸೆವ ಪರಿಯನು ಮಾಳ್ಪೆನೆನುತಾ |
ಶಶಿಮುಖಿಯ ಸಂತೈಸಿದನು ನಯದಿ || ೨ ||

ಧರಣಿಪಾಲಗೆ ಬಳಿಕಿದೆಲ್ಲವ |
ನರುಹಿ ನೀನಿದಕೊಪ್ಪದಿದ್ದರೆ |
ತ್ವರಿತದಿಂದಲಿ ಬಿಡುವೆನೀ ಪುರಿಯ ||
ಕರೆದರೆಂದಿಗು ಬಾರನೆನಲದ |
ನರಿತು ಗುರುವಚನಪ್ರಸಾದವ |
ದಿರಲಿ ಶಿರದೊಳಗೆಂದನಾ ರಾಯ || ೩ ||

ಇನಿತದೆಲ್ಲವ ಕಾಣುತಾಗಲೆ |
ಮುನಿಸುತರು ಗೌತಮಿಸಹಿತಲಾ |
ಜನಪತಿಯ ಬೀಳ್ಕೊಂಡು ತತ್ಸತಿಯ ||
ವಿನಯದಲಿ ನಿಲ್ಲಿಸಿ ನಿಜಾಶ್ರಮ |
ಕೆನುತ ನಡೆದರು ಗುರು ತೆರಳ್ದನು |
ಮನೆಗೆ ಕರೆಕೊಂಡಾ ಶಕುಂತಲೆಯ || ೪ || || 279 ||

**ಕಂದ**

ಅಳುಕುತ ಬಳುಕುತ ನಡೆವುತ |
ನಿಲುತಾ ಮಾರ್ಗದೊಳೆ ತನ್ನ ಪೂರ್ವಾಪರಮಂ ||
ಹಲವಂಗದೊಳಾ ಸತಿ ಹಂ |
ಬಲಿಸುತ ಘನಶೋಕದಿಂದ ಹಲುಬಿದಳಾಗಲ್ || ೧ || || 280 ||

**ನವರೋಜು - ಆದಿ**

ಹರ ಹರ ಈ ಸ್ಥಿತಿಯೆನಗೆ | ದೊರಕಿತೆ ಹಾ ವಿಧಿ ನಿನಗೆ ||
ಹರುಷವೆ ಎಂತಿರಲಿನ್ನೂ | ಪರರಲಿ ಜೀವಿಸಿ ನಾನು || ೧ ||

ಎನ್ನನೆ ತಾ ಮರೆದವನು | ಎನ್ನಲಿ ಪುಟ್ಟಿದುದನ್ನು ||
ತನ್ನಯ ಹೋಲ್ವಿಕೆಯೆಂದು | ಮನ್ನಿಪನೇ ಪತಿಯೆಂದು || ೨ ||

ಯಾತಕೆ ಬಂದನು ನೃಪನು | ಯಾತಕೆ ಮೆಚ್ಚಿದೆ ನಾನು ||
ಈತನ ಪೋಲುವರಿಲ್ಲ | ಭೂತಳದೊಳ್ ಪುಸಿಯಲ್ಲ || ೩ || || 283 ||

**ತೋಡಿ - ಅಷ್ಟ**

ಏನ ಮಾಡಲಿನ್ನು | ಈ ಶೋಕವ |
ನಾನಲಾರೆ ನಾನು || ಏನ || ಪ ||
ತಂದೆಯಾಜ್ಞೆಯನ್ನು | ಹೊಂದದೆ ಮನ |
ಬಂದ ಕಾರ್ಯವನು ||
ಅಂದು ಮಾಡಿದೆನದ | ರಿಂದವನೆಡೆಗೈದು |
ವಂದವಳಿದುದೆನಗೆ | ಈ ಬಗೆಗೆ || ಏನ || ೧ ||

ಸಾವೆನೆಂದರೀಗ | ಗರ್ಭಿಣಿಯಿಹೆ |
ಜೀವಿಸುವರೆ ಬೇಗ ||
ಕಾವ ಕರ್ತೃಗಳಿಲ್ಲ | ದೇವರೆ ಮುನಿದನಿ |
ದಾವುದಕೆನುತಾವನು | ಪೇಳುವನು || ಏನ || ೨ ||

ಯಾಕೆ ಪಡೆದೆನ್ನನು | ಭೂಲೋಕಕೆ |
ನೂಕಿ ಪೋದೆ ನೀನು ||
ಸಾಕಲಾರದೆ ತಾಯೆ | ನಾಕವಾಸಿನಿ ಕಾಯ |
ಬೇಕೆನ್ನನೊದಗಿ ಬಂದು | ನೀನಿಂದು || ಏನ || ೩ || || 286 ||

**ಶಂಕರಾಭರಣ - ಅಷ್ಟ**
ಮರುಗುತಿಂತಿರಲಾಕೆ ನೊಂದು | ಮೇಲೆ |
ತಿರುಗುವ ಮೇನಕೆ ಬಂದು | ತನ್ನ |
ತರಳೆಯ ನಭಕೊಯ್ಯಲೆಂದು | ಕಂಡು |
ಗುರು ನೃಪನೆಡೆಗಾಗಿ ಬಂದು || ನಿನ್ನ |
ತರುಣಿ ಸಹಿತ ನಾ ಮಂ | ದಿರಕೈದುವಾಗಳ |
ಚ್ಚರಿಯಾಯಿತೊಂದದ | ನೊರೆವೆ ಕೇಳೆಂದನು || ೧ ||

ಭೂತಳಕಭ್ರದಿಂದೊಂದು | ಘೋರ |
ಭೂತವೊ ಪಕ್ಷಿಯೊ ಬಂದು | ನಿನ್ನ |
ನಾಥೆಯ ಪಿಡಿದೊಯ್ದುದೆಂದು | ಪೇಳ್ದ |
ಮಾತಿಗೆ ಮನುಜೇಂದ್ರನಿಂದು || ಅವ |
ಳಾತುರವಿಲ್ಲೆನ | ಗೀ ತೆರವಾದುದೆ |
ಪ್ರೀತಿಯೆನುತ ಹರು | ಷಾತಿಶಯದೊಳಿರ್ದ || ೨ || || 288 ||

**ಕಂದ**
ಅನಿತರೊಳಿತ್ತಲ್ ಮೇನಕೆ |
ತನುಜೆಯನೊಡಗೊಂಡು ಪೋಗಿ ಗಗನದ ಗತಿಯೋಳ್ ||
ಅನುವಿನೊಳತಿದೂರದೊಳಿಹ |
ಮುನಿ ಮಾರೀಚಾಂಕನಡಿಗೆ ಮಣಿದಿಂತೆಂದಳ್ || ೧ || || 289 ||

**ಸಾರಂಗ - ಅಷ್ಟ**
ಅವಧರಿಸುವುದೆಲೆ ಮುನೀಂದ್ರನೆ | ಮೇನಕೆಯು ನಾನು |
ಯುವತಿಯೀಕೆಯೆನ್ನ ನಂದನೆ ||
ಇವಳನೊಲಿದು ಸಲಹು ನೀನೆಂದು | ತತ್ಪತಿ ವಿಯೋಗ |
ವಿವರವೆಲ್ಲ ಪೇಳ್ದಳವಗಂದು || ೧ ||

ಅದಕೆ ಮುನಿಪನೊಪ್ಪಿಕೊಂಡನು | ತತ್ಸುತೆಯ ತನ್ನ |
ಸದನದೊಳಗೆ ನಿಲಿಸಿಕೊಂಡನು ||
ಮುದದಿ ಮುನಿಯ ಬೀಳುಕೊಂಡಳು | ಮೇನಕೆಯು ತನ್ನ |
ತ್ರಿದಿವಕಾಗಿ ನಿಲದೆ ಹಾಯ್ದಳು || ೨ || || 291 ||

**ವಾರ್ಧಕ**
ಹರಿಣಾಂಕಕುಲಜ ಕೇಳಾ ಶಕುಂತಲೆ ಸುಖದೊ |
ಳಿರುತಿರ್ದಳಾ ತಪಸಿಯಾಶ್ರಮದೊಳತ್ತಲಾ |
ವರಶಕ್ರತೀರ್ಥದೊಳ್ ಬಲೆಯನಂಬಿಗನೋರ್ವ ನಿಕ್ಕುತಿರ್ಪಾಗಳಲ್ಲಿ ||
ತಿರೆಯಾಣ್ಮನೂರ್ಮಿಕೆಯಿರಲ್ ಕಂಡು ಕೊಂಡದಂ |
ಹರುಷದಿಂದೈದಿ ಪುರವೀಥಿಯೊಳ್ ಸ್ವರ್ಣಕಾ |
ರರೊಳೋರುವಂಗೆ ತೋರಿಸುತವನೊಳದರ ಬೆಲೆಗಾಗಿ ಚರ್ಚಿಸುತಿರ್ದನು || ೧ || || 292 ||

**ಭಾಮಿನಿ**
ಅವರ ಪರಿಯನು ಕಾಣುತಾ ಭೂ |
ಧವನ ಚರರೆಮ್ಮೊಡೆಯನುಂಗುರ |
ವಿವರ ಕಯ್ಯೊಳಗುಂಟು ತಸ್ಕರರಿವರು ನಿಜವೆನುತ ||
ತಿವಿದು ತಲೆವಿಡಿದೆಳೆದು ಖಾತಿಯೊ |
ಳವರ ರಟ್ಟೆಯ ಬಿಗಿದು ಕೊಂಡೊ |
ಯ್ದವನಿಪತಿ ದುಷ್ಯಂತನೊಡನಿಂತೆಂದರಭಿನಮಿಸಿ || ೧ || || 293 ||

**ಮುಖಾರಿ - ಏಕ**
ಜೀಯ ಲಾಲಿಸುವುದೆಮ್ಮ ಮಾತ |
ಲೋಕವಿಖ್ಯಾತ || ಜೀಯ || ಪ ||
ಇವರೊಯ್ದು ನಿನ್ನ ಮುದ್ರಿಕೆಯನು | ಆ ಪೇಟೆಯೊಳಗೆ |
ವಿವರಿಸುತದರ ವಿಕ್ರಯವನು ||
ವಿವಿಧೋಕ್ತಿಯೊಳಿರಲಿವರನು ಕಂಡಾವ್ |
ತವಕದಿ ಪಿಡಿತಂದೆವು ನಿನ್ನೆಡೆಗಿ |
ನ್ನಿವರ ವಿಚಾರಿಸುತಿವರಿಗೆ ಮುಂದೆಸ |
ಗುವುದನು ಪೇಳೆಮಗವನಿಪ ವೀರನೆ || ಜೀಯ || ೧ || || 294 ||

**ಕೇದಾರಗೌಳ - ಅಷ್ಟ**
ಚರರೆಂದ ಮಾತಿಗೆ ಕೆರಳಿ ಕೇಳಿದ ನೃಪ |
ವರನವರೀರ್ವರನು ||
ಅರುಹಿರಿ ನಿಮಗಾವ ಪರಿಯೊಳೆನ್ನುಂಗುರ |
ದೊರಕಿತೆಂಬುದನೆಂದನು || ೧ ||

ಧೀರನೆಂದನು ಸ್ವರ್ಣಕಾರನಂಬಿಗ ತಂದು |
ತೋರಿದನೆನಗದನು ||
ಬೇರೆ ನಾನರಿಯೆ ವಿಚಾರವನೆನಲೆಂದ |
ನಾ ರಾಯಗಾ ಸೂತನು || ೨ ||

ಶಕ್ರತೀರ್ಥಕೆ ಬಲೆಯಿಕ್ಕಿದೆನೆನಗಲ್ಲಿ |
ಸಿಕ್ಕಿತುಂಗುರವು ತಾನು ||
ಠಕ್ಕನಲ್ಲೆನುತಲಿ ಘಕ್ಕನಿತ್ತನು ಸೃಷ್ಟಿ |
ಚಕ್ರಪಾಲನಿಗದನು || ೩ || || 297 ||

**ಭಾಮಿನಿ**
ಉಂಗುರವ ಪಿಡಿದೀಕ್ಷಿಸಲು ನೃಪ |
ಪುಂಗವನ ಹೃದಯದಲಿ ಹೊಳೆದುದು |
ಮಂಗಳಾಂಗಿ ಶಕುಂತಲೆಯ ತನುವೊಡನೆ ತತ್ಪ್ರತಿಯ ||
ಸಂಗವಾಕೆಯ ಭಂಗ ನಿಜವಚ |
ನಂಗಳರಿವಾಯ್ತವನು ಹಾ ಲಲಿ |
ತಾಂಗಿ ಹಾಯೆನುತವನಿಯಲಿ ಹಮ್ಮೈಸಿ ಹಲುಬಿದನು || ೧ || || 298 ||

**ನೀಲಾಂಬರಿ – ಆದಿ**
ಶಿವ ಶಿವಿಂಥಾ ಮರವೆಯಾಕೆ |
ಕವಿದುದೆನ್ನಾತ್ಮವನು ||
ಅವಿವೇಕದಲಿ ಬಿಸುಟೆನೆನ್ನ |
ಯುವತೀರತುನವನ್ನು || ೧ ||

ಹಲವು ಕಾಲಗಳನು ತಪದಿ |
ಕಳೆದರೂ ಇಂಥವಳ ||
ಗಳಿಸಲರಿದು ನೂಕಿದೆನು ತಾ | ನೊಲಿದು ಬಂದಿರ್ದವಳ || ೨ ||

ನರರ ನಿಂದೆಯಾತ್ಮಶೋಕ |
ನಿರಪರಾಧಿನಿಯನು ||
ತೊರೆದ ಪಾಪವಿವುಗಳಿಂದ |
ಲಿರುವೆನೆಂತು ನಾನು || ೩ ||

ನಾನಾಪರಿಯ ಕುರುಹನೆನಗಾ |
ದೀನೆ ಪೇಳ್ದೊಡದನು ||
ಮಾನಸದಲಿ ಗ್ರಹಿಸದವಳ |
ಮಾನಗಳೆದೆ ನಾನು || ೪ ||

ಅರಸಿ ಎಲ್ಲಾ ದಿಸೆಯೊಳಿನ್ನು |
ತರುವೆನೆಂದರಿಲ್ಲ ||
ತರುಣಿಯವಳನುಗ್ರಹಭೂತ |
ಮುರಿದು ತೆಗೆದುದಲ್ಲ || ೫ ||

ತರುಣಿ ಬಾರೆ ಮೊಗವ ತೋರೆ |
ಜರೆದೆ ನಿನ್ನನೆಂದು ||
ಕೆರಳದೆನಗಾನಂದಪಡಿಸೆ |
ಕರುಣದಿಂದಲಿಂದು || ೬ || || 304 ||

**ಕಂದ**
ಎಂದರಸನಿಂತು ಬಹು ಪರಿ |
ಯಿಂದಂ ಕಲ್ಮರಗಳಾದೊಡಂ ಕರಗುವವೋಲ್ ||
ನೊಂದಳುವುದನೀಕ್ಷಿಸುತಿಂ |
ತೆಂದಂ ತತ್ಸಖ ವಸಂತಕಂ ನೃಪವರನೊಳ್ || ೧ || || 305 ||

**ಪಂತುವರಾಳಿ - ಆದಿ**
ಲಾಲಿಸಯ್ಯ | ಭೂಪ | ಲಾಲಿಸಯ್ಯ || ಪ ||
ಲಾಲಿಸೈ ಸುಶೀಲ ಧರಣೀ |
ಪಾಲ ನಾನು ಪೇಳುವುದನು || ಲಾಲಿ || ಅ. ಪ. ||
ಬರಿದೆ ಮೂಢರಂತೆ ನೀನು | ಮರುಗಿ ಮಾಳ್ಪ ಕಾರ್ಯವೇನು |
ನರರಿಗಜನ ಲಿಖಿತ ತಪ್ಪ | ಲರಿದು ಭಾವಿಸೆ ||
ಅರಸಿಯಗಲಿ ಹೋದಳೆಂದು | ಕರಗುತಿರ್ದ ಎಮ್ಮ ಕಾಯ |
ಸ್ಥಿರವೆ ಮೂರು ದಿನದ ಬಾಳ್ವೆ |
ಯುರಿಯೆಯೇನು ದೊರೆಯೆ ನೀನು || ಲಾಲಿ || ೧ ||

ಆತ್ಮನೋರ್ವನಖಿಳ ದೇಹ | ವರ್ತಿ ಸಕಲ ಕರ್ಮಕವನೆ |
ಕರ್ತೃ ನಾವು ನಮ್ಮದೆಂಬ | ಮರ್ತ್ಯರಜ್ಞರು ||
ಚಿತ್ತದಲಿ ತಿಳಿದು ಶೋಕ | ಮುಕ್ತನಾಗು ನೃಪನೆ ನೀನೆ |
ನುತ್ತ ಪಲವು ಬಗೆಯೊಳವನ |
ಮಿತ್ರನೊಡಬಡಿಸಿದನಂದು || ಲಾಲಿ || ೨ || || 307 ||

**ವಾರ್ಧಕ**
ಬಳಿಕ ನೃಪನಳಲನುರೆ ತೊರೆದಲ್ಲಿ ಭಯದೊಳು |
ಮ್ಮಳಿಸುವವರೀರ್ವರಂ ದೂತರಿಂದಲಿ ಬಿಡಿಸಿ |
ಕಳುಪಿ ನಿಜಕೃತಿಯೊಳಿರುತಿರ್ದನವನರಸಿಯಾ ಮಾರೀಚನಾಶ್ರಮದೊಳು ||
ಕಳೆದೈದು ತಿಂಗಳಂ ಬಳಿಕೊಂದು ದಿನದೊಳಂ |
ಹಲವನೆಣಿಸುತ ಚಿಂತೆಯಿಂದಿರಲ್ಕಾ ಮುನಿಪ |
ನೆಲೆ ತರುಣಿ ನಿನಗೇಕೆ ದುಮ್ಮಾನವಾಯ್ತು ಪೇಳೆನಲಾಕೆಯಿಂತೆಂದಳು || ೧ || || 308 ||

**ಮೇಚಾಳಿ – ಏಕ**

ಪೇಳಲೇನೆಲೆ ಮುನಿಪಾಲನೆ | ಎನ್ನ |
ಬಾಳಿಕೆಯನು ಸತ್ತ್ವಶೀಲನೆ || ಪ ||
ಇನಿಯ ದುಷ್ಯಂತನು ವೀರನು | ಎನ್ನ |
ಜನಕ ಕೌಶಿಕನತಿ ಧೀರನು || ಪೆತ್ತ |
ಜನನಿ ಮೇನಕೆಯಾದ | ರೆನಗಿವರೊಲವಿಲ್ಲ || ೧ ||

ಮಾಸ ತುಂಬಿದುದೆನಗೀಗಲು | ಎನ್ನ |
ಪೋಷಣೆಗೆನ್ನವರಾಗಲು || ಅಂಬು |
ಜಾಸನನೊಲುಮೆಯ | ವಾಸನೆಯೆನಗಿಲ್ಲ || ೨ ||

ಮುನಿಗಳಾಗಿರುವಂತ ನಿಮ್ಮಯ | ಸೇವೆ |
ಯನು ಪರಿಗ್ರಹಿಸುವುದೆನ್ನಯ || ಚಿತ್ತ |
ಕನುವಲ್ಲವೆನುತ ಕಂ | ಬನಿಯ ಸೂಸಿದಳಂದು || ೩ || || 311 ||

**ಬೇಗಡೆ - ಏಕ**

ಎಂದವಳ ನುಡಿ | ಯಂದವನು ತನ್ನ ||
ಮಾನಸದೊಳರಿದು ಮು | ನೀಂದ್ರನೆಲೆ ಶರ |
ದಿಂದುಮುಖಿ ನಿನ್ನ ||
ತಂದೆಯಂತೊಲವಿಂದ ಪೊರೆವೆನು |
ಮುಂದೆ ಶ್ರೀಗೋವಿಂದಪದಕೃಪೆ |
ಯಿಂದ ಸುಖವನು ಹೊಂದಿದಪೆ ನೀ |
ನೆಂದುಸಿರ್ದನು ಸುಂದರಾಂಗಿಗೆ || ೧ ||

ಬಳಿಕ ಮುನಿವಧು | ಗಳನು ತತ್ಸತಿಯ ||
ಶುಶ್ರೂಷೆಗಾ ಮುನಿ | ತಿಲಕನಿಟ್ಟನು |
ಕೇಳು ಮುಂಗಥೆಯ ||
ಕೆಲವು ದಿನದಲಿ ಪಡೆದಳಾ ಕೋ |
ಮಲೆ ಸಲಗ್ನದೊಳರ್ಭಕನನಾ |
ಗಳೆ ಮಹೋತ್ಸವವಾಯ್ತು ಜಗತೀ |
ತಲದೊಳಿರುವ ಸಮಸ್ತ ಜನರಿಗೆ || ೨ || || 313 ||

**ಕಾಪಿ - ಏಕ**

ಇಂದು ಕುಲಜನೆ ಕೇಳು ಜನಿಸಿದ | ಕಂದನಂಗವನು || ಕಂಡು ಮು |
ನೀಂದ್ರ ಮಾಡಿಸುತವಗೆ ಲೌಕಿಕ | ದಂದಮೆಲ್ಲವನು || ಕೌಶಿಕ |
ನಂದನೆಯ ಪೋಷಣೆಯ ಕಾರ್ಯವ | ನಂದು ಸರ್ವವನು || ತರುಣಿಯ |
ರಿಂದ ನಡೆಸುತಲಿರ್ದು ದಿನ ಹ | ನ್ನೊಂದನೆಯೊಳಗವನು || ಸದ್ವಿಧಿ |
ಯಿಂದ ಭರತಾಹ್ವಯವನಿಡಲಾ | ಸುಂದರಗೆ ಬಳಿಕವನ ತೊಟ್ಟಿಲೊ |
ಳಿಂದುವದನೆಯರಿರಿಸಿ ನಿಶಿಯಲಿ | ನಿಂದು ತೂಗಿದರಿಂತು ಪಾಡುತ || ೧ || || 314 ||

**ಬಿಲಹರಿ - ಅಷ್ಟ**

ಜೋ ಜೋ ಶಶಿಕುಲದೀಪ ಕಲಾಪ |
ಜೋ ಜೋ ಮಂಜುಳರೂಪ ನಿಷ್ಪಾಪ ||
ಜೋ ಜೋ ತರಳಪ್ರವಾರ ಗಂಭೀರ |
ಜೋ ಜೋ ದಿವ್ಯಶರೀರ ಕುಮಾರ || ಜೋ ಜೋ || ೧ ||

ತರಣಿಕಿರಣ ಬಾಲ ಭರತನೆ ಜೋ ಜೋ |
ಪರಮ ಸದ್ಗುಣಗಣಭರಿತನೆ ಜೋ ಜೋ ||
ಅರವಿಂದದಳನಿಭನೇತ್ರನೆ ಜೋ ಜೋ |
ಕರುಣಾಳು ಸರ್ವಪವಿತ್ರನೆ ಜೋ ಜೋ || ೨ || || 316 ||

**ತೋಡಿ - ಅಷ್ಟ**
ಇನಿತನೀಕ್ಷಿಸುತಾಗ | ವನಿತೆ ಶಕುಂತಲೆ |
ಘನಹರುಷವ ತಾಳ್ದಳು ||
ಮುನಿಪನಾನಂದವ | ನಿನಗೇನನೆಂಬೆನು |
ಜನಪಾಲಾಗ್ರಣಿಯೆ ಕೇಳು || ೧ ||

ಬಳಿಕ ಬಾಲಕನಲ್ಲಿ | ಸಲೆ ಶುಕ್ಲಪಕ್ಷದ |
ನಳಿನವೈರಿಯ ತೆರದಿ ||
ಬೆಳಗುತ್ತ ಕ್ರಮದಿಂದ | ಬಳೆವುತಿರ್ದನು ಋಷಿ |
ತಿಲಕನ ಮಂದಿರದಿ || ೨ ||

ಈ ಸುಕುಮಾರಗೆ | ಭೂಷಣಗಳನು ಮು |
ನೀಶ ತರಿಸಿಕೊಡಲು ||
ಆ ಶಕುಂತಲೆಯಿಟ್ಟು | ಪೋಷಿಸುತಧಿಕ ಸಂ |
ತೋಷದೊಳಿರುತಿರ್ದಳು || ೩ ||

ವರನಗಲಿದನೆಂಬ | ಕೊರತೆಯನೆಲ್ಲವ |
ಮರೆದಳು ಚಿತ್ತದಲಿ ||
ತರಳನಾಟಗಳಿಂದ | ತರಳಾಕ್ಷಿಯಿಂತೈದು |
ವರುಷವ ಕಳೆದಳಲ್ಲಿ || ೪ || || 320 ||

**ಭಾಮಿನಿ**
ಇಳೆಯರಸ ಕೇಳಿರ್ದಳಿಂತಾ |
ಲಲನೆಯಂದಿನೊಳತ್ತ ದಾನವ |
ಕುಲದೊಳುದಿಸಿದ ಕಾಲನೇಮಿಯ ತನಯ ದುರ್ಜಯನು ||
ಬಲಯುತನು ನಿಜಮೂಲನಗರಿಯೊ |
ಳೊಲವಿನಿಂದಿರುತಿರ್ದನಾ ಖಳ |
ಕುಲಶಿರೋಮಣಿಯಾಪ್ತರೊಡನಿಂತೆಂದನೊಂದು ದಿನ || ೧ || || 321 ||

**ಕೇದಾರಗೌಳ - ಝಂಪೆ**
ಕೇಳಿರೈ ಭಟರು ಮುದದಿ | ಸಕಲ ಸುರ |
ಜಾಲವೆಮ್ಮಯ ವೈರದಿ ||
ಬಾಳಿರ್ಪುದೀಗಲಾವು | ಸುಮ್ಮನಿರು |
ವಾಳುತನವಾವ ಘನವು || ೧ ||

ಅರಿಭಟರನಾದಿಯೊಳಗೆ | ಕೊಲ್ಲದಿರೆ |
ಕೊರತೆಯವರಿಂದಲೆಮಗೆ ||
ಬರುವುದದರಿಂದಲೀಗ | ನಿರ್ಜರರ |
ನಿರಿಯಬೇಕೈದಿ ಬೇಗ || ೨ ||

ಎನಲು ಕೇಳುತ ಸಕಲರು | ಅಹುದು ನಿಜ |
ವೆನುತ ಗರ್ವದೊಳಿದ್ದರು ||
ದನುಜದುರ್ಜಯನವರನು | ಪೊಗಳುತೊ |
ಮ್ಮನದಿಂದ ಸವನಿಸಿದನು || ೩ || || 324 ||

**ಅಹೇರಿ - ಝಂಪೆ**
ಆಜಿಗನುವಾಗೆದ್ದರಾಗ | ದೇವ |
ರಾಜನಲ್ಲಿಗೆ ದುರ್ಜಯಾದಿಗಳು ಬೇಗ || ಪ ||
ಪರಶು ಗದೆ ಮುಸಲ ಮು | ದ್ಗರ ಮುಖ್ಯ ಕೈದುಗಳ |
ಧರಿಸಿ ಹೂಂಕರಿಸಿ ಸುರ | ಪುರಕೈದಿ ಮುಸುಕಿ ತ |
ತ್ಪರಿಚರರನಟ್ಟಿ ಹೊ | ಯ್ದುರುಬಿ ಹಿಡಿದೆಲವೊ ನಿ |
ಮ್ಮರಸನನು ಕರೆಯಿರೆನೆ ಭಯದಿ | ಓಡಿ |
ಸುರಪಾಲನೆಡೆಗೆ ಬಂ | ದೊರೆದರತಿ ನಯದಿ || ೧ || || 325 ||

**ನವರೋಜು - ಏಕ**
ಸುರರಾಯಾ ಕೇಳಯ್ಯ | ನಾ |
ವರುಹುವ ಮಾತನು ಜೀಯ ||
ದುರುಳ ದನುಜಬಲ | ವಿರಗೊಡದೆಮ್ಮನು |
ಹರಣವ ಕಾಯ್ದರ | ನರಸಿಕೊ ಮೊದಲಲಿ || ೧ ||

ಎತ್ತ ಕಂಡರು ನಮಗೆ | ಮೊಗ |
ವೆತ್ತಲಸಾಧ್ಯವು ಪುರಿಗೆ ||
ಮುತ್ತಿಗೆಯಿಕ್ಕಿ ಮ | ಹಾಸ್ತ್ರದಲೆಸುತಮ |
ರೋತ್ತಮರನು ಸದೆ | ವುತ್ತಲಿ ಬರುವರು || ೨ || || 327 ||

**ಸೌರಾಷ್ಟ್ರ - ತ್ರಿವುಡೆ**
ಎಂದ ನುಡಿಯನು ಕೇಳಿ ಖತಿಯೊಳ |
ಗಿಂದ್ರನುಸಿರಿದನಂಜದಿರಿ ನೀ |
ವಿಂದೆ ದನುಜರ ಗೆಲ್ವ ಯುಕ್ತಿಯ | ಸಂಧಿಸುವೆನು || ೧ ||

ಕರೆಯಿರೈ ದಿಗಧಿಪರನೆಲ್ಲರ |
ಕರೆಯಿರೈ ಕಲಿಯಕ್ಷರಕ್ಷರ |
ಕರೆಯಿರೈ ಸಕಲಾಮರೌಘವ | ತ್ವರಿತದಿಂದ || ೨ ||

ಎಂದು ಚಾರರನೆಲ್ಲರೆಡೆಗಮ |
ರೇಂದ್ರನಟ್ಟಿದನವರ ನುಡಿಯಲಿ |
ಬಂದು ಪೇಳ್ದರು ಯಕ್ಷರಾಕ್ಷಸ | ರಿಂದ್ರಗೆರಗಿ || ೩ || || 330 ||

**ಭೈರವಿ - ಏಕ**
ಕರೆಸಿದೆಯೇತಕೆ ನಮಗೆ | ನಿ |
ರ್ಜರಸಂಕುಲಪತಿ ನಿನಗೆ ||
ದೊರಕಿದ ದಂದುಗವೇನು | ಅದ |
ನರುಹೆಮಗೀಗಲೆ ನೀನು || ೧ ||

ಎನಲೆಂದನು ವಾಸವನು | ಎ |
ಮ್ಮನುವರಕರಿ ದುರ್ಜಯನು ||
ದನುಜಬಲವ್ರಜ ಸಹಿತ | ಬಂ |
ದನು ಸುರಪುರ ಮುಸುಕುತ್ತ || ೨ ||

ಅವನ ಮಹಾಜಿಗೆ ನಾವು | ಪೋ |
ಗುವವೆಮ್ಮೊಡನೆಯೆ ನೀವು ||
ತವಕದಿ ಬಹುದೆನಲಾಗ | ಕೇ |
ಳ್ದವರುಸಿರಿದರತಿ ಬೇಗ || ೩ ||

ಇದಕೇತಕೆ ನೀವಿಂದು | ನಾವ್ |
ಸದೆವೆವು ರಿಪುಗಳನೆಂದು ||
ತ್ರಿದಶೇಂದ್ರಗೆ ತಲೆವಾಗಿ | ಐ |
ದಿದರರಿಭಟರೆಡೆಗಾಗಿ || ೪ || || 334 ||

**ಭಾಮಿನಿ**
ಯಕ್ಷರಾಕ್ಷಸಬಲವ ನೋಡುತ |
ಲಕ್ಷಿಯಲಿ ಕಿಡಿಗೆದರಿ ದುರ್ಜಯ |
ನೀ ಕ್ಷಣದೊಳೀ ಭಟರ ಭಂಗಿಸಿಬಿಡುವೆನೆನುತಿರಲು ||
ಈಕ್ಷಿಸುತಲವನಾರುಭಟೆಯನು |
ಲಕ್ಷಿಸದೆ ನಿಂದಿದಿರಿನಲಿ ಹ |
ರ್ಯಕ್ಷನಾದದೊಳೆಂದರಾ ಖೇಚರರು ಖಾತಿಯಲಿ || ೧ || 335 ||

**ಭೋಗಷಟ್ಪದಿ - ಮಟ್ಟೆ**
ಎಲೆ ಮದಾಂಧ ಕೇಳು ನಿನ್ನ |
ಬಲದ ಗರ್ವದಿಂದ ನಮ್ಮ |
ಪೊಳಲ ಮುಸುಕಿ ಕೆಟ್ಟೆ ನಿನ್ನ | ಕೊಲುವೆವೆಂದರು ||
ಕೊಲುವ ಮಾತು ಕಡೆಯೊಳಿರಲಿ |
ಕುಲಿಶಧರನ ಕರೆಯಿರೆನ್ನ |
ಕಲಹ ನಿಮ್ಮೊಳಾಗದೆನುತ | ಲಳುಕದೆಚ್ಚನು || ೧ ||

ಇಂದ್ರನಾಜಿ ಈ ಶರೀರ |
ದಿಂದ ನಿನಗೆ ಸಿಕ್ಕದೆನುತ |
ನಿಂದು ಖಾತಿಯಿಂದಲೆಚ್ಚ | ರಂದು ಶರಗಳ ||
ಹಂದೆಗಳಿರ ಸದೆವೆ ನಿಮ್ಮ |
ನೆಂದು ದನುಜಪತಿ ಮಹಾಸ್ತ್ರ |
ಬೃಂದವನ್ನು ರೋಷಚಿತ್ತ | ದಿಂದಲೆಚ್ಚನು || ೨ ||

ಆತನಸ್ತ್ರದಿಂದ ಖಚರ |
ವ್ರಾತ ಸೋಲೆ ಕಂಡು ದಿಗಧಿ |
ನಾಥರೆದ್ದರೊಡನೆ ಸುರರು | ಖಾತಿಗೊಳ್ಳುತ ||
ದೈತ್ಯಬಲವನೆಲ್ಲವನು ವಿ |
ಘಾತಿಸುವೆವೆನುತ್ತ ಯುದ್ಧ |
ರೀತಿಯಿಂದ ನಡೆದರಸುರ | ನಾಥನಿದಿರಿಗೆ || ೩ || || 338 ||

**ವಾರ್ಧಕ**
ಅವನೀಶ ಕೇಳ್ ಬಳಿಕ ಸುರಭಟರಸುರಭಟರ |
ಹವಕೈದಿ ಸಲೆಸಾಹಸತ್ವದಿಂ ಸತ್ವದಿಂ |
ವಿವಿಧಾಸ್ತ್ರದಿಂದಲೆಸುತೋಡಿದರ್ ತೋಡಿದರ್ ಕರುಳುಗಳನರಿವರ್ಗದ ||
ಅವರೊಡೆಯನತ್ಯಹಂಕಾರದಿಂ ಕಾರದಿಂ |
ದಿವಿಜ ದಿಕ್ಪಾಲಸಂಘಾತಮಂ ಘಾತಮಂ |
ಕವಿಸಿ ಮೊದಲಿಸಿ ಮಾತಾಡಿಸುತ ತಾಡಿಸುತ ಗೆಲುತಿರ್ದನೊಲವಿನಿಂದ || ೧ || || 339 ||

**ಸಾಂಗತ್ಯ - ರೂಪಕ**
ಅಸುರನ ಧುರವನೀಕ್ಷಿಸಿ ತನ್ನ ಸೂತನೊ |
ಳುಸಿರಿದನಿಂದ್ರನೀ ಖಳನು ||
ಅಸಮಸಾಹಸನಿವನೆಸುಗೆಯಳ್ಯಕ್ಷರಾ |
ಕ್ಷಸರು ಸೋತರು ಪೇಳಲೇನು || ೧ ||

ಉಳಿದವರಿವನನ್ನು ಗೆಲಲಾರರಿನ್ನೋರ್ವ |
ಬಲವಂತ ದುಷ್ಯಂತನಿಹನು ||
ಇಳಿಯೊಳೆನ್ನಾಪ್ತನು ಘಳಿಲನಲ್ಲಿಗೆ ಪೋಗಿ |
ತಿಳುಪಿ ನೀ ಕರೆತಾರಾತನನು || ೨ ||

ಎನುತ ತನ್ನಯ ರಥವನು ಕೊಟ್ಟು ಮತ್ತೆ ಲೇ |
ಖನಮೊಂದ ಬರೆದೀಯಲದನು ||
ವಿನಯದೊಳ್ ಕೈಕೊಂಡು ಘನವೇಗದಲಿ ಬಂದ |
ನನಘ ಭೂಪತಿಯೆಡೆಗವನು || ೩ ||

ಬಂದು ದುಷ್ಯಂತಗೆ ವಂದಿಸೆ ನೃಪನೊಲ |
ವಿಂದ ಸತ್ಕರಿಸುತಿಂತೆಂದ ||
ಇಂದ್ರಾದಿಗಳು ಕ್ಷೇಮದಿಂದಿರುವರೆ ನೀನು |
ಬಂದುದೇಕೆನಲವನೆಂದ || ೪ ||

ದೊರೆಯೆ ಕೇಳ್ ಶಕ್ರಾದಿಸುರರು ಸುಕ್ಷೇಮದಿಂ |
ದಿರುವರೈ ನಾನಿಲ್ಲಿಗೀಗ ||
ಬರುವ ಕಾರಣವೇನನೊರೆಯಲಿ ನಿನಗದ |
ಬರೆದು ಕೊಟ್ಟಿಹ ಶತಯಾಗ || ೫ ||

ಎಂದು ಮಾತಲಿ ತಾನು ತಂದ ಲೇಖನವೀಯ |
ಲಂದದ ನೃಪನಾಪ್ತಗಿತ್ತು ||
ಚಂದದಿಂದೋದಿ ಹೇಳೆಂದೆನಲಾತನಾ |
ನಂದದಿ ವಚಿಸಿದನಿಂತು || ೬ || || 345 ||

**ಕಾಂಭೋದಿ - ಝಂಪೆ**
ರಾಜರಾಜಾನ್ವಯಸ | ರೋಜಭಾಸ್ಕರ ಭಾನು |
ತೇಜ ರಿಪುಕಾನನಕುಠಾರ ||
ರಾಜ ಸಜ್ಜನಕಲ್ಪ | ಭೂಜ ದುಷ್ಯಂತಗೆ ಬಿ |
ಡೌಜ ಮಾಡುವ ನಮಸ್ಕಾರ || ೧ ||

ದುರುಳದುರ್ಜಯನೆಮ್ಮ | ಪುರವ ಮುತ್ತಿಹನವನ |
ಧುರವೆಮಗಸಾಧ್ಯವೈ ನೀನು ||
ಭರದೊಳೈತಂದವನ | ಮುರಿದೆಮ್ಮನುಳುಹೆನುತ |
ಬರೆದಿಹುದನೋದಿ ತಿಳುಪಿದನು || ೨ || || 347 ||

**ಭಾಮಿನಿ**
ವೀರ ಕೇಳ್ ಸುರವೀರಲೇಖನ |
ಸಾರವರಿತುಬ್ಬೇರಿ ಖಳಪರಿ |
ವಾರದಸುವನು ಹೀರಿಸುವೆನೆನುತೋರಣದಿ ನಭಕೆ ||
ಭೂರಿ ಶರ ತೂಣೀರ ಧನು ಸಹಿ |
ತೇರಿ ಸುರಪನ ತೇರನೈದಿದ |
ನಾ ನರೇಂದ್ರ ನಗಾರಿಸೂತನ ಸಾರಥಿತ್ವದಲಿ || ೧ || || 348 ||

**ವಾರ್ಧಕ**
ಅತ್ತಲಾ ದುರ್ಜಯಂ ಮುತ್ತಿದಮರಾವಳಿಯ |
ನೊತ್ತಾಯದಿಂ ಗೆಲ್ದು ಮತ್ತೆ ಸುರಪರಿಯನರ |
ಸುತ್ತಾತನಲ್ಲಿಗೊದರುತ್ತೈದಿ ನಿನ್ನಖಿಲ ಧೀರರಿಂದೀ ರಣದೊಳು ||
ಪೊತ್ತರಪಜಯವನೀ ಕೃತ್ಯದಿಂದಂಜುತೀ |
ಪತ್ತನವನುಳಿದಪೆಯೊ ಸತ್ತ್ವದಿಂದನುವರವ |
ನಿತ್ತಪೆಯೊ ತನಗುಸಿರೆನುತ್ತಾ ಶಚೀಂದ್ರನಂ ಜರೆದನವನುರವಣಿಸುತ || ೧ || || 349 ||

**ಮೆಚ್ಚು - ಅಷ್ಟ**
ದುರುಳನಿಂತೆನೆ ಕೇಳಿ ಖತಿಯಲಿ | ಸುರ |
ವರನೆಮ್ಮ ಬಲ ನಿನ್ನ ಹತಿಯಲಿ ||
ಜರಿದುದೆನ್ನುತ ಗರ್ವಿಸುವೆ ನೀನು | ಎನ್ನ |
ಪರಿಯನ್ನು ಯೋಚಿಸದೆಂದನು || ೧ ||

ಅರಿಯ ನಿನ್ನಂದವ ತೋರೆಲಾ | ಎನ್ನ |
ಧುರಕನುವಾಗಿ ನೀ ಬಾರೆಲಾ ||
ಬರಿಯಾಹಂಕೃತಿಯಿಂದ ಫಲವೇನು | ಎಂದು |
ದುರುಳನೆಚ್ಚನು ಬಾಣಾವಳಿಯನು || ೨ ||

ಖಳನ ಶರೌಘವ ಕಡಿದನು | ಶಕ್ರ |
ಕುಲಿಶದೊಳಸುರನ ಬಡಿದನು ||
ಕಳವಳಿಸುತ ದೈತ್ಯ ಬಿದ್ದನು | ಕ್ಷಣ |
ದೊಳಗೆ ಚೇತರಿಸಿಕೊಂಡೆದ್ದನು || ೩ ||

ಘೋರಶಕ್ತಿಯೊಳಿಂದ್ರಗೆರಗಿದ | ಸುರ |
ವೀರನಾಘಾತದೊಳೊರಗಿದ ||
ಭೂರಿ ಚಿಂತೆಯನಾಂತು ಕರಗಿದ | ಮುಂದೆ |
ದಾರಿಯನರಿಯದೆ ಮರುಗಿದ || ೪ || || 353 ||

**ನೀಲಾಂಬರಿ - ರೂಪಕ**
ಅಕಟಕಟೀ ದನುಜನನೇ | ತಕೆ ಕೆಣಕಿದೆ ಗೆಲುವಡೆನಗೆ |
ಶಕುತಿಯೆ ಸಾಲದು ಮುಂದಿನ | ಯುಕುತಿಯನೇಂಗೈವೆ ||
ಸಕಲಾಂಗದೊಳನುದಿನ ಸುರ | ನಿಕರಕೆ ದಿತಿತನುಜರ ಬಾ |
ಧಕಮೊದಗುವುದಲ್ಲದೆ ಸಿರಿ | ಸುಖವೆಂಬುದನರಿಯೆ || ೧ ||

ಇಂದಿನಲೀ ದನುಜನ ದೆಸೆ | ಯಿಂದುಳಿವನು ಕಾಣದೆ ಸಖ |
ನಿಂದಾದರು ಗೆಲ್ವಪೆನೆಂ | ಬೊಂದಭಿಲಾಷೆಯಲಿ ||
ಅಂದದೊಳಟ್ಟಿದೆನಾ ಧರ | ಣೀಂದ್ರನೆಡೆಗೆ ಮಾತಲಿಯನು |
ಬಂದಾ ನೃಪ ನಿಲುವುದರಲಿ | ಕೊಂದಪನಿವನೆನ್ನ || ೨ || || 355 ||

**ಮಾರವಿ - ಏಕ**
ಎಂದಳಲುತ್ತಿರಲಂದಲ್ಲಿಗೆ ಜವ |
ದಿಂದಲಿ ದುಷ್ಯಂತ ||
ಬಂದರಿದಾಹವದಂದವನುಸಿರಿದ |
ನಿಂದ್ರನನೀಕ್ಷಿಸುತ || ೧ ||

ಏತಕಳುವೆ ಸುರನಾಥನೆ ಸದೆವೆನು |
ದೈತ್ಯನನೀ ಕ್ಷಣದಿ ||
ಭೀತಿಯ ತೊರೆಯೆನಲಾತನಿಗಾ ಪುರು |
ಹೂತ ನುಡಿದ ನಯದಿ || ೨ ||

ಬಂದೆಯ ನೃಪ ತವ ಸಂದರ್ಶನವಾ |
ಯ್ತಿಂದಿಗೆ ಸಾಕೆನಗೆ ||
ಮುಂದುಳಿವಿಲ್ಲಕಟೆಂದವನಪ್ಪಿದ |
ಡೆಂದನು ನೃಪನವಗೆ || ೩ ||

ದಿತಿಸುತರಿಂದೀ ಗತಿ ನಿನಗಿಂದೊದ |
ಗಿತೆ ಶಿವ ಶಿವಯೆಂದು ||
ಖತಿಯಲಿ ದಾನವಪತಿಯನು ಕಂಡಾ |
ಕ್ಷಿತಿಪ ನುಡಿದ ನಿಂದು || ೪ || || 359 ||

**ಭೈರವಿ - ಅಷ್ಟ**
ದುರ್ಜಯನೇನೋ ನೀನು | ಧುರದಿ ನಿನ್ನ |
ನಿರ್ಜಯನೆನಿಸುವೆನು ||
ನಿರ್ಜರರನು ಗೆಲಿ | ದೂರ್ಜಿತಸ್ಥಿತಿಯ ವಿ |
ಸರ್ಜಿಸು ನೀನೆಂದನು || ೧ ||

ಹುಲು ನರಪಾಲ ಕೇಳೊ | ಎನ್ನಿದಿರಲಿ |
ನಿಲುವವರಾರು ಹೇಳೊ ||
ಇಳೆಯ ಮಾನವರ ಕೈ | ಚಳಕವ ಬಲ್ಲೆನೆಂ |
ದಳುಕದೆ ಖಳನೆಚ್ಚನು || ೨ ||

ದುರುಳನಸ್ತ್ರವ ಮುರಿದು | ಭೂಪತಿ ದಿವ್ಯ |
ಶರವನಾಗಲೆ ತೆಗೆದು ||
ಧುರಧೀರನಾದರೀ | ಸರಳ ಖಂಡಿಸೆನುತ್ತ |
ಭರದೊಳೆಚ್ಚನು ದೈತ್ಯಗೆ || ೩ ||

ಪೊಡವಿಪನಸ್ತ್ರದಲಿ | ದುರ್ಜಯ ಬಿದ್ದು |
ಮಡಿಯಲಾ ಭೀತಿಯಲಿ ||
ದಡಿಗ ದೈತೇಯರ | ಪಡೆ ಜೀವದಾಸೆಯ |
ಹಿಡಿದೋಡಿತಾಕ್ಷಣದಿ || ೪ ||

ಧರಣಿಪನೀಕ್ಷಿಸುತಾ | ದೈತ್ಯರನೆಲ್ಲ |
ಬೆರಸಿ ಬಾಣವನೆಸುತ ||
ಅರೆಗಳಿಗೆಯಲಿ ಸಂ | ಹರಿಸಲಾತನ ಕಂಡು |
ಸುರರು ಪೊಗಳ್ದರಿಂತು || ೫ || || 364 ||

**ಭಾಮಿನಿ**
ಧರಣಿಪಾಲಕ ವೀರ ರಿಪುನಿಶಿ |
ತರಣಿ ವಾರ್ಧಿಗಭೀರ ಪರಹಿತ |
ಸರಣಿ ಸತ್ಯಾಚಾರಸಂಯುತ ಚಾರುಚಾರಿತ್ರ ||
ಕರುಣಿ ಕಲ್ಮಶದೂರ ಮಂಜುಳ |
ಕರಣಿ ಕುಜನಕುಠಾರ ನೀ ನಿ |
ರ್ಮರಣಿಯಾಗೆಲೆ ಧೀರ ಎಂದುದು ನಿರ್ಜರಸ್ತೋಮ || ೧ || || 365 ||

**ವಾರ್ಧಕ**
ಬಲವೈರಿಯರಸನಂ ಪಿಡಿದಪ್ಪಿ ನೀನೆಮ್ಮ |
ಕುಲವನುದ್ಧರಿಸಿದೈಯೆಂದು ಕೊಂಡಾಡಿ ನಿಜ |
ನಿಲಯದೊಳ್ ಕೆಲವು ದಿನಮಾ ನೃಪನನಿರಿಸಿಕೊಂಡೈದೆ ಸತ್ಕರಿಸುತಿರಲು ||
ಬಳಿಕಿಂದ್ರ ಮುಖ್ಯ ಸುರರೊಡನವನಿಪಂ ತನ್ನ |
ಪೊಳಲಿಗೈದುವೆನೆಂದು ತಿಳುಪಿ ಬೀಳ್ಕೊಂಡು ಮಾ |
ತಲಿ ಸಹಿತ ಶಕ್ರರಥದೊಳ್ ಮರುದ್ಗತಿಯಿಂದ ಮೇದಿನಿಗೆ ಬರುತಿರ್ದನು || ೧ || || 366 ||

**ತೋಡಿ - ಅಷ್ಟ**
ಬರುತ ಮಾರೀಚನ | ವರ ವಸತಿಯ ಕಾಣು |
ತ್ತರಸ ಮಾತಲಿಗೆಂದನು ||
ನೆರೆ ಪುಣ್ಯಾಶ್ರಮವಿಲ್ಲೊಂ | ದಿರುವುದಿದಾರದೆಂ |
ದರುಹೆನಲವನೆಂದನು || ೧ ||

ತೋರುವುದಿದು ಮುನಿ | ಮಾರೀಚನಾಶ್ರಮ |
ವೀರ ಕೇಳೆನೆ ನೃಪನು ||
ತೇರನಲ್ಲಿಗೆ ನಡೆ | ಸಾ ಋಷಿವರನ ಕ |
ಣ್ಣಾರೆ ಕಂಡಪೆನೆಂದನು || ೨ ||

ಎನಲು ಮಾತಲಿ ರಥ | ವನು ತಂದಾ ತಪಸಿಯ |
ವನದಲಿ ನಿಲಿಸಿದನು ||
ಮುನಿಸುತರೊಡನಾಡು | ತ್ತನಘ ದುಷ್ಯಂತನ |
ತನಯನಲ್ಲಿರುತಿರ್ದನು || ೩ || || 369 ||

**ವಾರ್ಧಕ**
ತರಳರೊಡನಾಟದಿಂದೋಟದಿಂ ನೋಟದಿಂ |
ದಿರುತ ನೃಪವೃತ್ತಿಯಿಂ ಯುಕ್ತಿಯಿಂ ಶಕ್ತಿಯಿಂ |
ಧರಿಸಿ ಹೂಂಕೃತಿಯೊಳಂ ಧೃತಿಯೊಳಂ ಖತಿಯೊಳಂ ಮೆರೆವ ಮೃಗದುರುಬೆಗಳನು ||
ಭರದೊಳಬ್ಬರಿಸುತ್ತ ಬೆರಸುತ್ತ ಚರಿಸುತ್ತ |
ಉರುಗೋಲ ಪಿಡಿವುತಂ ಜಡಿವುತಂ ಬಡಿವುತಂ |
ಮುರಿವುತಾನಂದದಿಂದಂದದಿಂ ಚಂದದಿಂ ಶಶಿಕುಲಜನೆಸೆದಿರ್ದನು || ೧ || || 370 ||

**ರೇಗುಪ್ತಿ - ಅಷ್ಟ**
ಧರಣಿಯಾಣ್ಮನವನ ಕಂಡು | ಚಿತ್ತದಿ ಘನ |
ಹರುಷವನಾಂತುಕೊಂಡು ||
ತರಳನಲಿ ನೃಪ | ವರಲಕ್ಷಣಂಗಳ್ಗೆ |
ಬೆರಗಾಗುತ್ತಾತನ | ಕರೆದಿಂತು ನುಡಿದನು || ೧ ||

ಹುಡುಗ ಎನ್ನಯ ಮಾತನು | ಕೇಳಿದು ಮುನಿ |
ಯಡವಿಯಾಗಿಹುದು ನೀನು ||
ಪೊಡವೀಶಲಕ್ಷಣ | ವಿಡಿದಿರ್ಪೆ ನಿನ್ನನು |
ಪಡೆದವರಾರೆನ | ಲೊಡನೆಂದನಣುಗನು || ೨ ||

ಜನನಿ ಶಕುಂತಲೆಯು | ಪಾಪಾತ್ಮನು |
ಜನಕನಾತನ ಸುದ್ದಿಯು ||
ನಿನಗೇತಕವನಂದು | ಘನತೆಯನುಳಿದು ಸು |
ಮ್ಮನೆಯೆನ್ನ ಮಾತೆಯು | ಮುನಿದು ಬಿಟ್ಟಿಹನೆಂದ || ೩ || || 373 ||

**ಭಾಮಿನಿ**

ತರಳನುಕ್ತಿ ನರೇಂದ್ರನೊಡಲನು |
ಕೊರೆದುದಂಬಿನ ತೆರದಿ ನೃಪ ತ |
ನ್ನರಸಿಯೆಂತೋ ಬದುಕಿಹಳು ತತ್ತನುಜನಿವನೆಂದು ||
ಅರಿದು ಬಾ ಮಗು ನಿನ್ನ ತಾಯಿಯ |
ತೊರೆದ ತುಚ್ಛನು ತಾನೆಯೆನ್ನುತ |
ಕರೆದು ಬಾಲನನಪ್ಪಿ ರೋದಿಸುತಿರ್ದನೇನೆಂಬೆ || ೧ || || 374 ||

**ಸಾಂಗತ್ಯ - ರೂಪಕ**

ತಿಳಿದಿದನೆಲ್ಲವ ಸಲೆ ಮುನಿವಟುಗಳು |
ಘಳಿಲನೆ ಪೋಗಿ ತನ್ಮುನಿಗೆ ||
ತಿಳುಹಲಾತನು ಶಕುಂತಲೆ ಸಹಿತೈತಂದ |
ನಲಘುಬಲಾಢ್ಯನಿರ್ದೆಡೆಗೆ || ೧ ||

ತಂದೆಯ ಕರದಿಂದ ಕಂದ ತಪ್ಪಿಸಿಕೊಂಡು |
ಬಂದವ್ವೆಯೊಡನಾವನಿವನು ||
ನಂದನ ತನಗೆ ನಾನೆಂದೆನ್ನನಪ್ಪಿದ |
ನಿಂದಿದೇನುಸಿರೆಂದನವನು || ೨ ||

ಆರಾದೊಡೇನೆಮ್ಮ ಪ್ರಾರಬ್ಧವೆನುತಲಾ |
ನಾರಿ ನಲ್ಲನ ಪೂರ್ವಕೃತದ ||
ಸಾರವ ಸ್ಮರಿಸಿ ಭರ್ತಾರನನೀಕ್ಷಿಸ |
ಲಾರದೆ ತಿರುಹಿದಳ್ ಮೊಗವ || ೩ ||

ತನಗೆ ವಿಮುಖಳಾದಂಗನೆಯನೀಕ್ಷಿಸಿದ ಭೂ |
ಪನ ಚಿತ್ತ ವ್ಯಥೆಯನೇನೆನಲಿ ||
ಘನಶೋಕದಿಂದ ತನ್ನನೆ ತಾನೆ ಹಳಿವುತ್ತಾ |
ಮುನಿಯ ನೋಡಿದನಾತನಲ್ಲಿ || ೪ ||

ಅರಸನಾ ಋಷಿಪಾದಕ್ಕೆರಗಲಾತನನೆತ್ತಿ |
ಪರಸುತಿಂತೆಂದ ತಾಪಸನು ||
ಪರಿಣಾಮವೇನಯ್ಯ ದೊರೆಯೆ ಶೋಕಿಪುದೇತ |
ಕರುಹು ನೀನೆನಲೆಂದ ನೃಪನು || ೫ || || 379 ||

**ಕಾಂಭೋದಿ - ಝಂಪೆ**
ಮುನಿವರನೆ ಕೇಳೆನ್ನ | ವನಿತೆ ಈ ಪದ್ಮಲೋ |
ಚನೆ ಪತಿವ್ರತೆಯಿವಳನಗಲಿ ||
ಘನಪಾಪಿಯಾಗಿ ಬಾ | ಳ್ವೆನು ನೋಳ್ಪುದೇಕೆನ್ನ |
ನನಘರೆಂದುಸಿರ್ದನಳಲುತಲಿ || ೧ ||

ಧರಣಿಪನ ನುಡಿಯಾತ | ನರಸಿಯಂತರ್ಯವನು |
ಕರಗಿಸಿತು ಶಿಶುಸಹಿತ ಬಂದು ||
ಅರಸನಡಿಯಲಿ ಬಿದ್ದು | ಚರಣವನು ಕಣ್ಣೀರ |
ಸುರಿಸಿ ತೊಳೆದಿಂತೆಂದಳವಳು || ೨ ||

ಕಾಂತ ಕೇಳ್ ನಿನ್ನಾಜ್ಞೆ | ಯಂತೆ ನಡೆಯದೆ ತಾಯ |
ತಂತ್ರದಲಿ ಬಂದು ನಾನಿಲ್ಲಿ ||
ನಿಂತೆನೀ ಮುನಿಯಭವ | ನಾಂತದೊಳಿಂದು ಪರಿ |
ಯಂತಮೀತನ ರಕ್ಷಣೆಯಲಿ || ೩ ||

ತರಳನುದಿಸಿದನದರ | ತರುವಾಯ ನಿನ್ನೆಡೆಗೆ |
ಬರುವ ಕೃತಿಯೆನಗಿರ್ಪುದದನು ||
ಮರೆದೆನೀ ತಪ್ಪುಗಳ | ಅರಸ ನೀ ಕ್ಷಮಿಸೆನುತ |
ಮರಳಿ ವಂದಿಸಿದಳಾತನನು || ೪ ||

ಅಡಿಗೆರಗಿದಬಲೆಯನು | ನುಡಿಸಲರಿಯದೆ ಭೂಪ |
ನೊಡಲ ಶೋಕಾನಲಗೆ ಕೊಟ್ಟು ||
ಅಡಿಗಡಿಗೆ ತನ್ನಿಂದ | ನಡೆದ ಕೃತ್ಯವ ನೆನೆದು |
ಕೆಡೆದನವನಿಯಲಿ ವಶಗೆಟ್ಟು || ೫ || 384 ||

**ಕಂದ**
ಆ ಕ್ಷಿತಿಪಾಲಕನಂದವ |
ನೀಕ್ಷಿಸಿ ಮಾರೀಚಮುನಿಪನತಿ ಕರುಣದೊಳಂ ||
ರಕ್ಷಿಸಬೇಕೀತನನೆನು |
ತಾ ಕ್ಷಣದೊಳಗವನನೆತ್ತಿ ಬಳಿಕಿಂತೆಂದ || ೧ || || 385 ||

**ತೋಡಿ - ತ್ರಿವುಡೆ**
ನೋಯದಿರು ನರನಾಥ ನಿನ್ನೀ |
ಜಾಯೆಯನು ತತ್ತನಯನನು ನುಡಿ |
ಸೀಯವಸ್ಥೆ ಘನತ್ವವಲ್ಲಿನ್ನು ||
ಹೇಯತೆಯನೆಣಿಸದಿರು ನೀನ |
ನ್ಯಾಯಿಯಲ್ಲ ಕುಶೀಲೆಯಲ್ಲೀ |
ತೋಯಜಾಂಬಕಿ ತಿಳಿದೆ ನಾನಿದನು || ೧ ||

ಹಿಂದೆ ಮುನಿ ದುರ್ವಾಸನೀ ಶರ |
ದಿಂದುವಕ್ತ್ರೆಗೆ ಶಾಪವಿತ್ತಿಹ |
ನೆಂದು ತಚ್ಚಾರಿತ್ರ್ಯವೆಲ್ಲವನು ||
ಅಂದು ನೃಪಗವನರಸಿಗಾ ಮೌ |
ನೀಂದ್ರನರುಹಲು ಕೇಳುತವರದ |
ರಿಂದ ತೊರೆದರು ತಮ್ಮ ದುಃಖವನು || ೨ ||

ಅರಸ ಬಿಗಿದಪ್ಪಿದನು ಕಾಂತೆಯ |
ನರಸಿಯಾಲಿಂಗಿಸಿದಳಿನಿಯನ |
ನಿರದೆ ತಮತಮಗಾದ ದುಃಸ್ಥಿತಿಯ ||
ಅರುಹಿಕೊಳ್ಳುತ ದಂಪತಿಗಳಾ |
ತರಳ ಸಹಿತಾನಂದದಲಿ ಮೈ |
ಮರೆದರವನಿಪ ಕೇಳಿದೈ ಕಥೆಯ || ೩ ||

ಬಳಿಕಲಾ ಮುನಿಯವರ ನಾ ಮಾ |
ತಲಿ ಸಹಿತ ಕರೆತಂದು ಮನೆಯಲಿ |
ಕೆಲವು ದಿನಮುಚಿತದಲಿ ಮನ್ನಿಸುತ ||
ನಿಲಿಸಿಕೊಳಲಾ ಮೇಲೆ ನೃಪ ನಿಜ |
ನಿಲಯಕೈದುವೆನಿನ್ನು ನಮ್ಮನು |
ಕಳುಪಿರೆನಲಿಂತೆಂದ ಮುನಿನಾಥ || ೪ ||

ಭರತನೆಂಬಭಿಧಾನವೆನ್ನಿಂ |
ದಿರುವುದೀ ಬಾಲಂಗೆ ನೀನಿದ |
ನರಿತುಕೋಯೆನಲಾತಗಾ ಕ್ಷಿತಿಪ ||
ನಿರೆ ನಿಜ ಸ್ತ್ರೀ ತನ್ನ ಶಿಶುವಾ |
ಸುರಪಸಾರಥಿಸಹಿತ ವಂದಿಸೆ |
ಪರಸಿ ಕಳುಪಿದನವರನಾ ಮುನಿಪ || ೫ || || 390 ||

**ಭಾಮಿನಿ**
ತಂದೆಯಂದದೊಳೆಮ್ಮ ಪೊರೆದಿರಿ |
ಚಂದದಲಿ ನಿಮಗಿದರೊಳೇನೆ |
ಮ್ಮಿಂದಹುದು ನಿಮ್ಮುಪಕೃತಿಗೆ ಜೋಡಿಲ್ಲವಿಂದಿನಲಿ ||
ಕಂದ ಸಹಿತೈದುವೆನು ಪತಿಯೊಡ |
ನೆಂದಳುತ ಮಗುಳಾ ಶಕುಂತಲೆ |
ವಂದಿಸಲು ಮುನಿ ಪರಸಿ ಕಳುಹಿದನವಳ ದುಗುಡದಲಿ || ೧ || || 391 ||

**ವಾರ್ಧಕ**
ಮಾರೀಚಮುನಿಪನಂ ಬೀಳ್ಕೊಂಡು ಬರ್ಪ ನಿಜ |
ನಾರೀಕುಮಾರಕರ್ ಸಹಿತಾ ಸುರೇಶ್ವರನ |
ತೇರಿನೊಳ್ ತನ್ನ ಪುರಕೈತಂದು ಮಾತಲಿಯನುಚಿತೋಕ್ತಿಯಿಂದ ಕಳುಪಿ ||
ಭೂರಿ ಸಂತೋಷದಿಂ ಸಕಲ ವೃತ್ತಾಂತಗಳ |
ನೋರಂತೆ ಪೇಳ್ದು ಸೋದರ ಮುಖ್ಯ ಪುರಜನ |
ರ್ಗಾ ರಾಯ ದುಷ್ಯಂತನಿಳೆಯನಾಳುತಲಿರ್ದನೇಕಾತಪತ್ರದಿಂದ || ೧ ||

ಎನುತ ಜನಮೇಜಯ ಕ್ಷಿತಿಪಾಲಚಂದ್ರಮಂ |
ಗನಘ ವೈಶಂಪಾಯನಂ ಪೇಳ್ದನಂದದಂ |
ಜನರೆಲ್ಲರುಂ ತಿಳಿವ ತೆರಮಾದ ಕರ್ಣಾಟ ಯಕ್ಷಗಾನದೊಳುಸಿರಿದ ||
ಮುನಿವರ ಭರದ್ವಾಜಗೋತ್ರಜ ಹಿರಣ್ಯಶ |
ರ್ಮನ ಸುಪ್ರಬಂಧಮಿದನೋದಿ ಕೇಳುವ ನರರ |
ಮನದಭೀಷ್ಟವನಿತ್ತು ಸಂತತಂ ಸಲಹಲಿ ಮಹಾಲಿಂಗನತಿ ಕೃಪೆಯೊಳು || ೨ || || 393 ||

**ಭೂಪಾಳಿ - ಝಂಪೆ**
ಮಾರಸಂಹಾರನಿಗೆ | ಮಂಗಲಾಕಾರನಿಗೆ |
ಮೂರು ಜಗದಾಣ್ವಂಗೆ | ಮುಕ್ಕಣ್ಣಗೆ ||
ಕಾರುಣ್ಯವಾರಿಧಿಗೆ | ಕಲ್ಪಾಂತಭೈರವಗೆ |
ಚಾರುಚಾರಿತ್ರಂಗೆ | ಚಂದ್ರಧರಗೆ ||
ಜಯ ಮಂಗಲಂ ನಿತ್ಯ ಶುಭ ಮಂಗಲಂ || ೧ ||

ಭವಭಯವಿದೂರನಿಗೆ | ಭಕ್ತಸಂಸಾರನಿಗೆ |
ದಿವಿಜೌಘಸೇವಿತಗೆ | ದಿತಿಜನುತಗೆ ||
ರವಿಶತೋದ್ಭಾಸನಿಗೆ | ರಜತಾದ್ರಿವಾಸನಿಗೆ |
ಭುವನಜನಪೋಷಣಗೆ | ಭೂತೇಶಗೆ ||
ಜಯ ಮಂಗಲಂ ನಿತ್ಯ ಶುಭ ಮಂಗಲಂ || ೨ ||

ಮಂಗಲಂ ಪರಶಿವಗೆ | ಪನ್ನಗವಿಭೂಷಣಗೆ |
ಮಂಗಲಂ ಪರಮ ಪಾ | ವನಮೂರ್ತಿಗೆ ||
ಮಂಗಲಂ ಭರ್ಗನಿಗೆ | ಬಹುಲಪುರವಾಸನಿಗೆ |
ಮಂಗಲಂ ಶ್ರೀ ಮಹಾ | ಲಿಂಗೇಶಗೆ ||
ಜಯ ಮಂಗಲಂ ನಿತ್ಯ ಶುಭ ಮಂಗಲಂ || ೩ || 396 ||

ಕ್ಷಿತಿಗುಣವಸುವಸುಧಾ ಸಂ |
ಮಿತಶಕವರ್ಷೇ ನಿಬದ್ಧಮಿದಂ ||
ಕೃತಿರತ್ನಂ ಪ್ರಥಿತಗುಣಂ |
ಸತತಂ ಜೀಯಾತ್ ಸಮಸ್ತಜನಹೃದ್ಯಂ || || 397 ||

**(ಎರಡನೆಯ ಸಂಧಿ ದುಷ್ಯಂತ ಚರಿತ್ರೆ ಮುಗಿದುದು)**

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪಾವಂಜೆ ಗುರುರಾವ್ ಅಂಡ್ ಸನ್ಸ್, ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ - ೧೯೫೮

**ಪ್ರಸಂಗ ಪ್ರತಿ ಆಧಾರ:** ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ ಪ್ರಕಟಿತ ಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ಲ. ನಾ. ಭಟ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಬರವಣಿಗೆ:** ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ವಿನ್ಯಾಸ:** ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ